19 August 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮತ್ಸರದ ಗುಣ ಕಿಚ್ಚನ್ನು ಹಚ್ಚಿದರೆ,
ವಾತ್ಸಲ್ಯದ ಗುಣ ಜೀವನಕ್ಕೆ
ಆಮ್ಲಜನಕವಾಗುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಅಭಿವೃದ್ಧಿಯಲ್ಲ, ರೈತರ ಮರಣಶಾಸನ: ನಿಖಿಲ್ ಕುಮಾರಸ್ವಾಮಿ — ಪುಟ ಸಂ. 2



ಚಿನ್ನತಂಬಿ ವಿರುದ್ಧ ಮತ್ತೆ ನಾಲ್ಕು ಪ್ರಕರಣ ದಾಖಲು — ಪುಟ ಸಂ. 3



ಅರಣ್ಯಾಧಿಕಾರಿಗಳ ಗುಂಡಿನ ದಾಳಿಗೆ ಮೃತಪಟ್ಟವರ ಅಂತ್ಯಕ್ರಿಯೆ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 255 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ವಂದೇ ಮಾತರಂ 'ಪೂರ್ಣ ಹಾಡಲ್ಲ'

### ನೇಣು ಹಾಕಿದರೂ ಎರಡೇ ಪ್ಯಾರಾ ಹಾಡೋದು: ಬಿ.ಕೆ.ಹರಿಪ್ರಸಾದ್

**ನವದೆಹಲಿ:** ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯನ್ನು ಪೂರ್ಣವಾಗಿ ಹಾಡುವುದಿಲ್ಲ. ಎರಡು ಪ್ಯಾರಾಗಳನ್ನಷ್ಟೇ ಹಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸ್ಪಷ್ಟಪಡಿಸಿದರು.

ಸೋನಿಯಾ ಗಾಂಧಿ ಅವರು ವಂದೇ ಮಾತರಂಗೆ ಅಪಮಾನ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಪ್ರತಿಕ್ರಿಯಿಸಿದ ಹರಿಪ್ರಸಾದ್ ಅವರು, ನೇಣು ಹಾಕಿದರೂ, ಜೈಲಿಗೆ ಹಾಕಿದರೂ ನಾವು ಹಾಡುವುದು ಎರಡು ಪ್ಯಾರಾ ಎಂದು ಹೇಳಿದರು.

ವಂದೇ ಮಾತರಂ ಅನ್ನು ಕಾಂಗ್ರೆಸ್ ವಿರೋಧಿಸುವುದಿಲ್ಲ. ಬಂಕಿಮಚಂದ್ರ ಚಟರ್ಜಿ ಬರೆದಿರುವ ಗೀತೆಯ ಎರಡು ಪ್ಯಾರಾಗಳನ್ನು ಮಾತ್ರ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಹಾಡುತ್ತೇವೆ ಎಂದು ಹೇಳಿದರು.

ರಾಜ್ಯದಲ್ಲಿ ಸರ್ಕಾರದ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಸರ್ಕಾರ ಜನರಿಂದ ಆಯ್ಕೆಯಾಗಿದೆ. ಕಾನೂನು ಪಾಲನೆ ಮಾಡಲಿ, ನಮ್ಮ ಆಕ್ಷೇಪವಿಲ್ಲ ಎಂದರು.



### ಜನಗಣಮನ ಎರಡನೇ ದರ್ಜೆಗೆ ತರುವ ಯತ್ನ

**ನವದೆಹಲಿ:** ವಂದೇ ಮಾತರಂ ಅನ್ನು ಕಡ್ಡಾಯಗೊಳಿಸುವ ಮೂಲಕ ರಾಷ್ಟ್ರಗೀತೆ ಜನಗಣಮನವನ್ನು ಎರಡನೇ ದರ್ಜೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಆರೋಪಿಸಿದರು.

ರಾಷ್ಟ್ರಗೀತೆ, ರಾಷ್ಟ್ರಧ್ವಜ ಹಾಗೂ ಪುಟ 2ಕ್ಕೆ

## ಸಿಎಂ ಡಿಕೆಶಿಗೆ ಎಚ್‌ಡಿಕೆ ಪಂಥಾಹ್ವಾನ

### ರಾಜ್ಯ ಸರ್ಕಾರದ ವಿರುದ್ಧ ರಣಕಹಳೆ | ನೈಸ್, ಬಿಡದಿ ಬಗ್ಗೆ ಚರ್ಚೆಗೆ ಸವಾಲು

**ಬೆಂಗಳೂರು:** ರಾಜ್ಯ ಸರ್ಕಾರ ಬಿಡದಿ ಟೌನ್‌ಶಿಪ್, ನೈಸ್ ವಿಚಾರವಾಗಿ ಭಂಡತನ ಪ್ರದರ್ಶನ ಮಾಡುತ್ತಿದೆ. ನಾನೇ ವೇದಿಕೆ ಸಿದ್ಧ ಮಾಡ್ತೀನಿ. ಕಾಂಗ್ರೆಸ್‌ನ ಹಾಲಿ, ಮಾಜಿ ಶಾಸಕರು ಚರ್ಚೆಗೆ ಬರಲಿ. ನಾನೇ ಏಕಾಂಗಿ ಆಗಿ ಎದುರಿಸುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.





ಬಿಡದಿ ಟೌನ್‌ಶಿಪ್ ಯೋಜನೆ, ನೈಸ್ ರೋಡ್ ಟೋಲ್ ವಿರೋಧಿಸಿ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಕರೆ ಕೊಟ್ಟಿದ್ದ ಪಾದಯಾತ್ರೆ ಎರಡೇ ದಿನಕ್ಕೆ ಮೊಟಕುಗೊಳಿಸಲಾಗಿತ್ತು. ಹೀಗಾಗಿ ಮಂಗಳವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ಕನಕಪುರದಲ್ಲಿ ಜಮೀನು ಮಾರಾಟ ಮಾಡಬೇಡಿ ಎಂದು ಸಿಎಂ ಶಿವಕುಮಾರ್ ಹೇಳುತ್ತಾರೆ. ಆದರೆ, ಬಿಡದಿ ರೈತರ ಕೃಷಿ ಜಾಗ ಪಡೆಯೋಕೆ ಹೊರಟಿದ್ದೀರಾ. ನಾನು ಚರ್ಚೆಗೆ ಸಿದ್ಧ. ಬನ್ನಿ ಮಾತಾಡೋಣ ಹೆದರಿ ಓಡಿ ಹೋಗಲ್ಲ ಎಂದು ಸಿಎಂ ಡಿಕೆಶಿಗೆ ಪಂಥಾಹ್ವಾನ ನೀಡಿದರು. ನೈಸ್ ಯೋಜನೆ ವಿಚಾರವಾಗಿ ವಾಗ್ದಾಳಿ ನಡೆಸಿದ ಅವರು, ನೈಸ್ ಯೋಜನೆ ಪುಟ 2ಕ್ಕೆ

### ಸರ್ಕಾರದ ವಿರುದ್ಧ ವಾಗ್ದಾಳಿ

**ಬೆಂಗಳೂರು:** ನೈಸ್ ಯೋಜನೆ ವಿಚಾರವಾಗಿ ಸರ್ಕಾರದ ನಿಲುವಿನ ವಿರುದ್ಧ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ತೀವ್ರ ವಾಗ್ದಾಳಿ ನಡೆಸಿದರು.

ಕಳೆದ 25–26 ವರ್ಷದಿಂದ ಈ ದಂಧೆ ನಡೆಯುತ್ತಿದೆ. ಸಿಎಂ ಡಿ.ಕೆ.ಶಿವಕುಮಾರ್ ಇದಕ್ಕೆ ಉತ್ತರ ಕೊಡಬೇಕು. ಸರ್ಕಾರಕ್ಕೆ ಅಭಿವೃದ್ಧಿ ಮಾಡಲು ಹಣ ಇಲ್ಲ. ಹೀಗಾಗಿ ಕೋರ್ಟ್ ಒಪ್ಪಂದ ಉಲ್ಲಂಘನೆ ಆಗಿದೆ ಅಂದ್ರೂ ನೈಸ್ ಟೋಲ್ ಪುಟ 2ಕ್ಕೆ

## ಸಾಹುಕಾರ್‌ಗೆ ಇಡಿ ಶಾಕ್

### ಕೆಪಿಎಸ್‌ಸಿ ಅಕ್ರಮ: ಶಿವಶಂಕರಪ್ಪ ಸೇರಿ 21ಕ್ಕೂ ಹೆಚ್ಚು ಸ್ಥಳಗಳಲ್ಲಿ ದಾಳಿ


**ಬೆಂಗಳೂರು:** ಪಶುವೈದ್ಯಾಧಿಕಾರಿಗಳ ಹುದ್ದೆ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್ ಸಿ) ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರ ಮನೆ ಹಾಗೂ ಕಚೇರಿ ಸೇರಿದಂತೆ 21ಕ್ಕೂ ಹೆಚ್ಚು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿದ್ದಾರೆ.

ಶಿವಶಂಕರಪ್ಪ ಅವರಿಗೆ ಸೇರಿದ ಮೂರು ಸ್ಥಳಗಳು ಸೇರಿದಂತೆ ಬೆಂಗಳೂರಿನ 13 ಮತ್ತು ರಾಜ್ಯದ ಇತರೆ 8 ಸ್ಥಳಗಳಲ್ಲಿ ದಾಳಿ ನಡೆದಿದೆ. ಪಶುವೈದ್ಯಾಧಿಕಾರಿ ನೇಮಕಾತಿಯಲ್ಲಿ ಕೋಟ್ಯಂತರ ಅವ್ಯವಹಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಮಂಗಳವಾರ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಸಾಹುಕಾರ್ ಅವರ ಮನೆ ಮತ್ತು ಕಲಬುರಗಿ ಜಿಲ್ಲೆ ಆಳಂದ ನಿವಾಸದ ಮೇಲೂ ದಾಳಿ ನಡೆಸಿದ್ದಾರೆ.

ಕೆಪಿಎಸ್ ಸಿ ಸದಸ್ಯೆ ಶಾಂತಾ ಹೊಸಮನಿ ಅವರ ಮನೆ ಮೇಲೂ ರೇಡ್ ನಡೆದಿದೆ. ಪಶುವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಯಾದ ಕೆಲವರ ಮನೆಗಳು ಸೇರಿದಂತೆ ರಾಜ್ಯದ 8 ಜಿಲ್ಲೆಗಳಲ್ಲಿ ಇಡಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಪಶುವೈದ್ಯಾಧಿಕಾರಿ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದು ದಾಖಲೆಗಳಿಂದ ಬೆಳಕಿಗೆ ಬಂದಿತ್ತು. ಆಯ್ಕೆಗೆ ಅಭ್ಯರ್ಥಿಗಳಿಂದ 70–80 ಲಕ್ಷ ಲಂಚ ಪಡೆದಿರುವ ಆರೋಪ ಕೇಳಿಬಂದಿತ್ತು. ಮಧ್ಯವರ್ತಿಗಳ ಲಂಚದ ಬೇಡಿಕೆ ಕುರಿತು 4 ಎಫ್‌ಐಆರ್ ದಾಖಲಾಗಿದೆ. ಲಂಚದ ಬೇಡಿಕೆ ಆಡಿಯೋ ಸಾಕ್ಷ್ಯ ಇಡಿಗೂ ಸಲ್ಲಿಕೆಯಾಗಿತ್ತು. ಹೀಗಾಗಿ ನೇಮಕಾತಿ ಅಕ್ರಮದ ಹಣದ ಜಾಡು ಹಿಡಿದು ಇಡಿ ಶೋಧಕ್ಕೆ ಮುಂದಾಗಿದೆ. ದಾಖಲೆ, ಡಿಜಿಟಲ್ ಸಾಕ್ಷ್ಯಗಳಿಗಾಗಿ ಹುಡುಕಾಟ ನಡೆಸಿದೆ ಎನ್ನಲಾಗಿದೆ.






ಶಿವಶಂಕರಪ್ಪ ಅವರು ತಮ್ಮ ಇಬ್ಬರು ಪುತ್ರಿಯರು ಕೈಗಾರಿಕಾ ವಿಸ್ತರಣಾಧಿಕಾರಿಯಾಗಿ ನೇಮಕವಾಗಲು ಸಹಕರಿಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶಿವಶಂಕರಪ್ಪ ಸಾಹುಕಾರ್ ಅವರನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಹುದ್ದೆಯಿಂದ ಅಮಾನಾತುಗೊಳಿಸಿದ್ದರು.

2019ರ ಸೆಪ್ಟೆಂಬರ್ 3ರಂದು ಕೆಪಿಎಸ್‌ಸಿ ಸದಸ್ಯರಾಗಿ ನೇಮಕವಾಗಿದ್ದ ಶಿವಶಂಕರಪ್ಪ ಅವರನ್ನು 2021ರ ಏಪ್ರಿಲ್ 3ರಂದು ಕೆಪಿಎಸ್‌ಸಿ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು.

### ಕೆಪಿಎಸ್‌ಸಿ ಅಧ್ಯಕ್ಷರಾಗಿ ಮರು ನೇಮಕಕ್ಕೆ 'ಸುಪ್ರೀಂ' ಆದೇಶ



**ಬೆಂಗಳೂರು:** ಪಶುವೈದ್ಯಕೀಯ ನೇಮಕಾತಿಯಲ್ಲಿ ಅಕ್ರಮ ಹಾಗೂ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನದಿಂದ ಶಿವಶಂಕರಪ್ಪ ಸಾಹುಕಾರ್ ಅವರನ್ನು ಅಮಾನತುಗೊಳಿಸಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಆದೇಶವನ್ನು ಕರ್ನಾಟಕ ಹೈಕೋರ್ಟ್ ರದ್ದು ಪುಟ 2ಕ್ಕೆ



## ದಸರಾ ಗಜಪಡೆ: ಅಂಬಾರಿ ಆನೆ ಅಭಿಮನ್ಯುಗಿಲ್ಲ ಸ್ಥಾನ

**ಮೈಸೂರು:** ನಾಡಹಬ್ಬ ದಸರಾದಲ್ಲಿ ಪಾಲ್ಗೊಳ್ಳಲಿರುವ ಗಜಪಡೆ ಪಟ್ಟಿಯನ್ನು ಅರಣ್ಯ ಇಲಾಖೆಯು ಮಂಗಳವಾರ ಬಿಡುಗಡೆ ಮಾಡಿದೆ. ಅಂಬಾರಿ ಆನೆ ಅಭಿಮನ್ಯುವನ್ನೇ ಕೈಬಿಟ್ಟಿರುವುದು ಅಚ್ಚರಿ ಮೂಡಿಸಿದೆ.



ಮೊದಲ ತಂಡದಲ್ಲಿ ಒಟ್ಟು 12 ಆನೆಗಳ ತಂಡವನ್ನು ಪ್ರಕಟಿಸಲಾಗಿದೆ. ಇದರಲ್ಲಿ 8 ಗಂಡು ಹಾಗೂ 2 ಹೆಣ್ಣಾನೆ ಸೇರಿವೆ. ಸದ್ಯ ಮದದಲ್ಲಿರುವ ಭೀಮ ಹಾಗೂ ಹರ್ಷ ಆನೆಗಳನ್ನು ಮೀಸಲು ಎಂದು ಪರಿಗಣಿಸಲಾಗಿದೆ.

ಧನಂಜಯ, ಮಹೇಂದ್ರ, ಏಕಲವ್ಯ, ಪ್ರಶಾಂತ, ಗೋಪಿ, ಶ್ರೀರಾಮ, ಸುಗ್ರೀವ, ಲಕ್ಷ್ಮಿ, ಕಾವೇರಿ, ರೂಪಾ, ಚೈತ್ರಾ ಹಾಗೂ ಶ್ರೀಕಂಠ ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಆಗಸ್ಟ್ 26ರಂದು ವೀರನಹೊಸಳ್ಳಿಯಿಂದ ಮೈಸೂರಿಗೆ ಗಜಪಡೆ ಪ್ರಯಾಣ ಆರಂಭ ಆಗಲಿದೆ. ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಬೆಂಗಳೂರಿನಲ್ಲಿ ಪಟ್ಟಿ ಬಿಡುಗಡೆ ಮಾಡಿದರು.

## ಶೂಟೌಟ್ ಸ್ಥಳದಲ್ಲಿ ಹೊಸ ಚಪ್ಪಲಿ ಪತ್ತೆ!

**ಚಾಮರಾಜನಗರ:** ಹನೂರು ಅರಣ್ಯದಲ್ಲಿ ಮೂವರು ಮೃತಪಟ್ಟ ಶೂಟೌಟ್ ಪ್ರಕರಣಕ್ಕೆ ಇದೀಗ ಹೊಸ ತಿರುವು ಸಿಕ್ಕಿದೆ. ಸ್ಥಳದಲ್ಲಿ ಶಸ್ತ್ರಾಸ್ತ್ರಗಳು ಹಾಗೂ ವನ್ಯಜೀವಿ ಮಾಂಸದ ಜತೆಗೆ ಸ್ಟಿಕ್ಕರ್ ಕೂಡ ತೆಗೆಯದಂತಿರುವ ಬಳಸದ ಜೋಡಿ ಚಪ್ಪಲಿ ಪತ್ತೆಯಾಗಿರುವುದು ಅನುಮಾನಗಳಿಗೆ ಕಾರಣವಾಗಿದೆ.

ಬೇಟೆಗೆ ತೆರಳಿದ್ದರೆ ಚಪ್ಪಲಿಗಳು ಇಷ್ಟು ಹೊಸದಾಗಿರಲು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಮೃತರ ಕುಟುಂಬಸ್ಥರು ಎತ್ತುತ್ತಿದ್ದಾರೆ.

ಅರಣ್ಯ ಇಲಾಖೆ ಪ್ರಕಾರ, ಕಾರ್ಯಾಚರಣೆ ವೇಳೆ ಆರೋಪಿತ ಬೇಟೆಗಾರರಿಂದ



ಎರಡು ನಾಡ ಬಂದೂಕುಗಳು, ಟಾರ್ಚ್‌ಲೈಟ್‌ಗಳು, ಗುಂಡುಗಳು, ಬೇಟೆಯ ಉಪಕರಣಗಳು ಹಾಗೂ ಸುಮಾರು 20ರಿಂದ 30 ಕೆ.ಜಿ. ವನ್ಯಜೀವಿ ಮಾಂಸ ಎಂದು ಶಂಕಿಸಲಾದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ. ಪುಟ 2ಕ್ಕೆ

## ತಮಿಳರ ಹಸ್ತಕ್ಷೇಪ ಅನಗತ್ಯ

### ನಮ್ಮ ವಿಚಾರಕ್ಕೆ ಬರಬೇಡಿ: ಸಿಎಂ ಡಿಕೆಶಿ ಎಚ್ಚರಿಕೆ



**ಬೆಂಗಳೂರು:** ಹನೂರು ವನ್ಯಜೀವಿ ವಲಯದಲ್ಲಿ ಮೂವರು ಶಂಕಿತ ಬೇಟೆಗಾರರ ಹತ್ಯೆಗೆ ಸಂಬಂಧಿಸಿದಂತೆ ತಮಿಳುನಾಡು ರಾಜಕಾರಣಿಗಳು ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು. ಕರ್ನಾಟಕ ತನ್ನ ಪ್ರದೇಶದ ಪಾವಿತ್ರ್ಯವನ್ನು ರಕ್ಷಿಸುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಂಗಳವಾರ ಎಚ್ಚರಿಕೆ ನೀಡಿದರು.

ಚಾಮರಾಜನಗರದಲ್ಲಿ ಆಗಸ್ಟ್ 15ರಂದು ಮೂವರು ವ್ಯಕ್ತಿಗಳ ಸಾವಿನ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂಬ ತಮಿಳುನಾಡಿನ ರಾಜಕಾರಣಿಗಳ ಬೇಡಿಕೆಯನ್ನು ಅವರು ತಳ್ಳಿಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡು ತನ್ನದೇ ಆದ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳನ್ನು ತಾವೇ ನಿರ್ವಹಿಸಿಕೊಳ್ಳಬೇಕು. ಇದು ಒಕ್ಕೂಟ ವ್ಯವಸ್ಥೆ. ಯಾವುದೇ ರಾಜ್ಯ ಬೇರೆ ಯಾವುದೇ ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು. ತಮಿಳುನಾಡಿ ಈ ಮೂಲಭೂತ ತಿಳುವಳಿಕೆಯನ್ನು ಹೊಂದಿರಬೇಕು. ತಮಿಳುನಾಡಿನ ಯಾವುದೇ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳಲ್ಲಿ ನಾನು ಭಾಗಿಯಾಗಲು ಸಾಧ್ಯವಿಲ್ಲ. ಪ್ರತಿಯೊಂದು ರಾಜ್ಯಕ್ಕೂ ತನ್ನದೇ ಆದ ಸಮಸ್ಯೆಗಳಿವೆ' ಎಂದು ತಿಳಿಸಿದರು.

ಕರ್ನಾಟಕ ಅರಣ್ಯ ಇಲಾಖೆಗೆ ಸಂಬಂಧಿಸಿದ ಗುಂಡಿನ ದಾಳಿ ಘಟನೆ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಪಕ್ಷವನ್ನು ಮೀರಿ ಸದಸ್ಯರು ಒತ್ತಾಯಿಸಿದ ವಿಷಯ ಮಂಗಳವಾರ ತಮಿಳುನಾಡು ವಿಧಾನಸಭೆಯಲ್ಲಿ ಪ್ರತಿಧ್ವನಿಸಿದ ಬೆನ್ನಲ್ಲೇ ಡಿಕೆಸಿ ಹೇಳಿಕೆ ನೀಡಿದ್ದಾರೆ. ಪುಟ 2ಕ್ಕೆ

## ಬಸ್ ಟಿಕೆಟ್ ದರ ಏರಿಕೆ: ಸಚಿವ ಸುರೇಶ್ ಸುಳಿವು

**ಬೆಂಗಳೂರು:** ಡೀಸೆಲ್ ಬೆಲೆ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸರ್ಕಾರಿ ಬಸ್ ಪ್ರಯಾಣ ದರ ಹೆಚ್ಚಳ ಮಾಡುವ ಕುರಿತು ಸಾರಿಗೆ ಸಚಿವ ಬೈರತಿ ಸುರೇಶ್ ಸುಳಿವು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸುರೇಶ್, ಕಳೆದ ಬಾರಿ ಬಸ್ ಪ್ರಯಾಣ ದರ ಪರಿಷ್ಕರಣೆಯಾದ ನಂತರ ಡೀಸೆಲ್ ಬೆಲೆ ಗಣನೀಯವಾಗಿ ಏರಿಕೆಯಾಗಿದೆ. ಆದರೂ ಬಸ್ ಪ್ರಯಾಣ ದರ ಏರಿಕೆಯಾಗಿಲ್ಲ. ಪ್ರತಿ ವರ್ಷ ನಾಲ್ಕೂ ಸಾರಿಗೆ ನಿಗಮಗಳು ಒಟ್ಟಾಗಿ ಸುಮಾರು 8,000ದಿಂದ 10,000 ಕೋಟಿ ನಷ್ಟ ಅನುಭವಿಸುತ್ತಿದೆ. ನಮಗೆ ಈ ಹಣ ಎಲ್ಲಿಂದ ಸಿಗಬೇಕು? ಇಲ್ಲದಿದ್ದರೆ ನಾವು ನಿಗಮಗಳನ್ನು ಮುಚ್ಚಬೇಕಾಗುತ್ತದೆ ಎಂದು ಹೇಳಿದರು.

ತೈಲೋತ್ಪನ್ನಗಳ ಬೆಲೆ ಹೆಚ್ಚಳದಿಂದಾಗಿ ನಿಗಮಗಳಿಗೆ ಭಾರಿ ಪ್ರಮಾಣದಲ್ಲಿ ನಷ್ಟ ಉಂಟಾಗುತ್ತಿದೆ. ಜನ ಸಾಮಾನ್ಯರಿಗೆ ಹೊರೆ ಆಗದ ರೀತಿಯಲ್ಲಿ ಪ್ರಯಾಣ ದರ ಹೆಚ್ಚಳ ಮಾಡಲಾಗುವುದು ಎಂದರು.





ಕರ್ನಾಟಕ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿ ಅಧ್ಯಕ್ಷ ಅತುಲ್ ಕುಮಾರ್ ತಿವಾರಿ ನೇತೃತ್ವದಲ್ಲಿ ಟಿಕೆಟ್ ದರಗಳ ಕುರಿತು ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ತಿವಾರಿ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದೇವೆ. ಸಮಿತಿ ರಚನೆಯಾಗಿ ಈಗಾಗಲೇ ಸುಮಾರು 20 ದಿನಗಳು ಕಳೆದಿವೆ. ಅವರು ಎಲ್ಲಾ ನಾಲ್ಕೂ ಸಾರಿಗೆ ನಿಗಮಗಳು ಹಾಗೂ ವಿವಿಧ ಸ್ಥಳಗಳಿಗೆ ಭೇಟಿ ಪುಟ 2ಕ್ಕೆ

## ವೈದ್ಯ ಡೆಪ್ಯೂಟಿ ಸ್ಪೀಕರ್; ಉಮಾಶ್ರೀ ಉಪಸಭಾಪತಿ

**ಬೆಂಗಳೂರು:** ರಾಜ್ಯ ವಿಧಾನಸಭೆ ಡೆಪ್ಯೂಟಿ ಸ್ಪೀಕರ್ ಆಗಿ ಭಟ್ಕಳ ಶಾಸಕ ಮಂಕಾಳ ವೈದ್ಯ ಮತ್ತು ವಿಧಾನಪರಿಷತ್ ಉಪಸಭಾಪತಿಯಾಗಿ ಉಮಾಶ್ರೀ ಮಂಗಳವಾರ ಅವಿರೋಧ ಆಯ್ಕೆಯಾಗಿದ್ದಾರೆ.

ಉಪಸಭಾಧ್ಯಕ್ಷ ಸ್ಥಾನಕ್ಕೆ ಮಂಕಾಳ ವೈದ್ಯ ಮತ್ತು ಉಪಸಭಾಪತಿ ಸ್ಥಾನಕ್ಕೆ ಉಮಾಶ್ರೀ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ವಿಧಾನಸಭೆಯಲ್ಲಿ ಉಪಸಭಾಧ್ಯಕ್ಷ ಸ್ಥಾನಕ್ಕೆ ಶಾಸಕ ಮಂಕಾಳ ವೈದ್ಯ ಅವರ ಹೆಸರನ್ನು ಪ್ರಸ್ತಾಪಿಸಲಾಯಿತು. ಬಳಿಕ ಸಿಎಂ ಡಿ.ಕೆ.ಶಿವಕುಮಾರ್ ಮತ್ತು ಸಚಿವ ಲಕ್ಷ್ಮಣ್ ಸವದಿ ಅವರು ಮಂಕಾಳು ವೈದ್ಯ ಅವರ ಹೆಸರನ್ನು ಅನುಮೋದಿಸಿದರು. ಬಳಿಕ ಸದನದ ಎಲ್ಲಾ ಸದಸ್ಯರ ಸರ್ವಾನುಮತದಿಂದ ಮಂಕಾಳ ವೈದ್ಯ ಅವರು ಉಪಸಭಾಧ್ಯಕ್ಷರಾಗಿ ಆಯ್ಕೆ ಯಾದರು. ಸ್ಪೀಕರ್ ಜಿ.ಎಸ್.ಪಾಟೀಲ್ ಅವರು ಧ್ವನಿ ಮತದ ನಂತರ ವೈದ್ಯ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಘೋಷಿಸಿದರು. ಸಿಎಂ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಉಪ ಸಭಾಧ್ಯಕ್ಷರ ಪೀಠದಲ್ಲಿ ಕೂರಿಸಿದರು. ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ವಿಸ್ತರಣೆಯಲ್ಲಿ ರುದ್ರಪ್ಪ ಲಮಾಣಿ ಅವರು ಸೇರ್ಪಡೆಗೊಂಡ ನಂತರ ರಾಜೀನಾಮೆ ನೀಡಿದ ನಂತರ ಉಪಸಭಾಪತಿ ಸ್ಥಾನ ಖಾಲಿಯಾಗಿತ್ತು.



ವಿಧಾನ ಪರಿಷತ್ತಿನ ಉಪಾಧ್ಯಕ್ಷೆಯಾಗಿ ಕಾಂಗ್ರೆಸ್ ಎಂಎಲ್‌ಸಿ ಉಮಾಶ್ರೀ ಮಂಗಳವಾರ ಸರ್ವಾನುಮತದಿಂದ ಆಯ್ಕೆಯಾದರು. ಉಮಾಶ್ರೀ ಸೋಮವಾರ ನಾಮಪತ್ರ ಸಲ್ಲಿಸಿದ್ದರು. ಉಮಾಶ್ರೀ 2001ರಲ್ಲಿ ವಿಧಾನ ಪರಿಷತ್ತಿಗೆ ನಾಮ ನಿರ್ದೇಶನಗೊಂಡರು ಮತ್ತು 2007 ರವರೆಗೆ ಸೇವೆ ಸಲ್ಲಿಸಿದರು. ಅವರು 2008 ರ ವಿಧಾನ ಸಭಾ ಚುನಾವಣೆಯಲ್ಲಿ ತೇರದಾಳದಿಂದ ಸ್ಪರ್ಧಿಸಿ ಸೋತರು, ನಂತರ 2013 ರಲ್ಲಿ ಗೆದ್ದು ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾದರು.

## ಪೊಲೀಸ್ ದೌರ್ಜನ್ಯ ತನಿಖೆಗೆ ಸಮಿತಿ ರಚನೆ: ಸುಪ್ರೀಂ ಆದೇಶ

**ನವದೆಹಲಿ:** ದೆಹಲಿಯಲ್ಲಿ ವಿದ್ಯಾರ್ಥಿ ಪ್ರತಿಭಟನಾಕಾರರ ವಿರುದ್ಧ ನಡೆದಿರುವ ಪೊಲೀಸ್ ದೌರ್ಜನ್ಯದ ಆರೋಪಗಳನ್ನು ಪರಿಶೀಲಿಸಲು ನಿವೃತ್ತ ನ್ಯಾಯಾಧೀಶರು, ಮಾಜಿ ಡಿಜಿಪಿ, ಮಾಜಿ ಸಿಬಿಐ ನಿರ್ದೇಶಕರು ಮತ್ತು ಇತರ ಸದಸ್ಯರನ್ನು ಒಳಗೊಂಡ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ತಿಳಿಸಿದೆ.




ಸಮಿತಿಯಲ್ಲಿ ಸೇರಿಸಬೇಕಾದ ಇತರ ಸದಸ್ಯರ ಕುರಿತು ವಿವಿಧ ಪಕ್ಷಗಳಿಂದ ಸಲಹೆಗಳನ್ನು ಸ್ವೀಕರಿಸಿದ ನಂತರ ಸಮಿತಿಯನ್ನು ರಚಿಸುವ ಆದೇಶವನ್ನು ಬುಧವಾರ ಪ್ರಕಟಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಪುಟ 2ಕ್ಕೆ

## ಶೂಟೌಟ್: ತ.ನಾಡಿನಿಂದ ತಲಾ 10 ಲಕ್ಷ ಪರಿಹಾರ

**ಚೆನ್ನೈ:** ಚಾಮರಾಜನಗರದ ಹನೂರು ವನ್ಯಜೀವಿ ವಲಯದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಗುಂಡೇಟಿಗೆ ಬಲಿಯಾದ ಮೂವರು ಶಂಕಿತ ಬೇಟೆಗಾರರ ಕುಟುಂಬಕ್ಕೆ ತಮಿಳುನಾಡು ಸರ್ಕಾರ ಮಂಗಳವಾರ ತಲಾ 10 ಲಕ್ಷ ರೂಪಾಯಿ ಪರಿಹಾರ ಘೋಷಿಸಿದೆ.

ಕರ್ನಾಟಕದ ಅರಣ್ಯದಲ್ಲಿ ಮೃತಪಟ್ಟ ತಮಿಳು ಮೂಲದ ಮೂವರ ಕುಟುಂಬಗಳಿಗೆ ತಮಿಳುನಾಡು ಅರಣ್ಯ ಇಲಾಖೆ ತಲಾ 10 ಲಕ್ಷ ರೂ. ಪರಿಹಾರ ನೀಡಲಿದೆ ಎಂದು ಅರಣ್ಯ ಸಚಿವ ಆರ್.ವಿ ರಂಜಿತ್ ಕುಮಾರ್ ಅವರು ಮಂಗಳವಾರ ಅಲ್ಲಿನ ವಿಧಾನಸಭೆಗೆ ಮಾಹಿತಿ ನೀಡಿದ್ದಾರೆ.




ತಮಿಳುನಾಡು ವಿಧಾನ ಸಭೆಯಲ್ಲೂ ಹನೂರು ಶೂಟೌಟ್ ವಿಚಾರ ಪ್ರಸ್ತಾಪವಾಗಿದೆ. ಡಿಎಂಕೆ ಮತ್ತು ಎಐಡಿಎಂಕೆ ಮುಖಂಡರು ಈ ಬಗ್ಗೆ ಸದನದಲ್ಲಿ ಧ್ವನಿ ಎತ್ತಿದರು. ಈ ವೇಳೆ ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ಪರಿಹಾರ ನೀಡುವುದಾಗಿ ಅರಣ್ಯ ಸಚಿವ ರಂಜಿತ್ ಕುಮಾರ್ ಘೋಷಿಸಿದರು. ಕರ್ನಾಟಕ ಸರ್ಕಾರ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂಬ ಆಗ್ರಹ ವ್ಯಕ್ತವಾಗಿದೆ.

ಮೃತರೆಲ್ಲರೂ ತಮಿಳುನಾಡು ಮೂಲದವರು. ಮೆಟ್ಟೂರು ಜಲಾಶಯ ನಿರ್ಮಾಣದಿಂದ ಹನೂರಿನಲ್ಲಿ ಅವರು ಪುಟ 2ಕ್ಕೆ

## ವಂದೇ ಮಾತರಂ ವಿರೋಧಿಗಳು ದೇಶ ಬಿಟ್ಟು ಹೋಗಿ: ಚನ್ನಬಸಪ್ಪ

**ಬೆಂಗಳೂರು:** ವಂದೇ ಮಾತರಂ ಭಾರತದ ಅಸ್ಮಿತೆ. ಅದನ್ನು ವಿರೋಧಿಸುವವರು ದೇಶ ಬಿಟ್ಟು ಹೋಗಿ ಎಂದು ಬಿಜೆಪಿ ಶಾಸಕ ಚನ್ನಬಸಪ್ಪ ಕಿಡಿಕಾರಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಸಕರು, ದೇಶದ ಕಾನೂನು ವಿರೋಧ ಮಾಡಬಹುದು ಎಂಬ ಮಾನಸಿಕತೆ ಅಕ್ಷಮ್ಯ. ವಂದೇ ಮಾತರಂ ವಿರೋಧ ಮಾಡುವ ಮುಸ್ಲಿಮರು ದೇಶ ಬಿಟ್ಟು ಹೋಗಿ. ನಿಮಗೆ ಅಂತಾನೇ ಪ್ರತ್ಯೇಕ ದೇಶ ಇದೆ. ಯಾಕೆ ಬೇಕು ಈ ದೇಶ ನಿಮಗೆ ಹಾಗಾದರೆ ಎಂದು ಪ್ರಶ್ನಿಸಿದರು. ವಂದೇ ಮಾತರಂ ವಿರೋಧಿಸುವ ಅನೇಕರು ಈ ದೇಶದಲ್ಲಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೂಡ ಇವರು ಈ ರೀತಿಯ ಚಟುವಟಿಕೆಗಳಿಗೆ ಶಕ್ತಿ ಕೊಡುತ್ತಿದ್ದರು. ಸೋನಿಯ ಗಾಂಧಿ, ರಾಹುಲ್ ಗಾಂಧಿ ಕೂಡಾ ಈ ದೇಶದಲ್ಲಿ ಪುಟ 2ಕ್ಕೆ

ಮೊದಲ ಪುಟದಿಂದ

## ತಮಿಳರ ಹಸ್ತಕ್ಷೇಪ ಅನಗತ್ಯ

ಸಿಎಂ ವಿಜಯ್ ಅವರ ಟೀಕೆಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ಪ್ರತಿಯೊಂದು ಹೇಳಿಕೆ ಬಗ್ಗೆಯೂ ಪ್ರತಿಕ್ರಿಯಿಸಲು ಬಯಸುವುದಿಲ್ಲ. ನಮ್ಮ ರಾಜ್ಯವನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ನಮಗೆ ತಿಳಿದಿದೆ ಎಂದು ಅವರು ತಿಳಿದಿರಬೇಕು. ಅವರು ತಮ್ಮ ಕೆಲಸವನ್ನು ಮಾಡಲಿ. ನಾವು ನಮ್ಮದನ್ನು ಮಾಡುತ್ತೇವೆ. ನಾನು ಅವರ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಬಯಸುವುದಿಲ್ಲ. ರಾಜ್ಯದ ಘನತೆ, ಸಮಗ್ರತೆ ಮತ್ತು ಸಾಂವಿಧಾನಿಕ ಅಧಿಕಾರವನ್ನು ಕಾಪಾಡುವುದು ನಮ್ಮ ಆದ್ಯತೆಯಾಗಿದೆ ಎಂದು ಅವರು ಹೇಳಿದರು.

## ಮರು ನೇಮಕಕ್ಕೆ 'ಸುಪ್ರೀಂ' ಆದೇಶ

ಮಾಡಿದೆ. ಅಲ್ಲದೆ, ಕೆಪಿಎಸ್ ಸಿ ಅಧ್ಯಕ್ಷ ಸ್ಥಾನಕ್ಕೆ ಶಿವಶಂಕರಪ್ಪ ಸಾಹುಕಾರ್ ಅವರನ್ನು ಮರುನೇಮಕಗೊಳಿಸುವಂತೆ ಸೂಚನೆ ನೀಡಿದೆ. ಕೆಪಿಎಸ್ ಸಿ ಅಧ್ಯಕ್ಷರಾಗಿದ್ದ ಶಿವಶಂಕರಪ್ಪ ಸಾಹುಕಾರ್ ಅವರನ್ನು ಜುಲೈ 10ರಂದು ರಾಜ್ಯಪಾಲರು ಅಮಾನತು ಮಾಡಿದ್ದರು. ಈ ಸಂಬಂಧ ಶಿವಶಂಕರಪ್ಪ ಸಾಹುಕಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಸೂರಜ್ ಗೋವಿಂದರಾವ್ ಅವರಿದ್ದ ಹೈಕೋರ್ಟ್ ಪೀಠ ಮಹತ್ವದ ತೀರ್ಪು ನೀಡಿದೆ.

ಶಿವಶಂಕರಪ್ಪ ಅವರನ್ನು ಅಮಾನತುಗೊಳಿಸುವಂತೆ ಸಚಿವ ಸಂಪುಟ ಸಲಹೆ ಅಥವಾ ಶಿಫಾರಸು ಮಾಡಿಲ್ಲ. ರಾಜ್ಯಪಾಲರು ಸಚಿವ ಸಂಪುಟದ ತೀರ್ಮಾನವನ್ನಷ್ಟೇ ಅನುಸರಿಸಬೇಕು ಎಂದು ಕೋರ್ಟ್ ತಿಳಿಸಿದೆ. 7 ದಿನಗಳಲ್ಲಿ ಕೆಪಿಎಸ್ ಸಿ ಅಧ್ಯಕ್ಷರನ್ನಾಗಿ ಶಿವಶಂಕರಪ್ಪ ಸಾಹುಕಾರ್ ಅವರನ್ನು ಮರುನೇಮಕ ಮಾಡುವಂತೆ ಸೂಚಿಸಿದೆ.

## ತ.ನಾಡಿನಿಂದ ತಲಾ 10 ಲಕ್ಷ ಪರಿಹಾರ

ವಾಸವಿದ್ದಾರೆ. ಅವರೆಲ್ಲ ತಮಿಳರು. ಅವರ ರಕ್ಷಣೆಯಾಗಬೇಕು ಎಂಬ ಅಭಿಪ್ರಾಯಗಳು ಸದನದಲ್ಲಿ ವ್ಯಕ್ತವಾಗಿವೆ.

ಅರಣ್ಯಾಧಿಕಾರಿಗಳು ಬಿಡುಗಡೆ ಮಾಡಿದ ಫೋಟೋಗಳಲ್ಲಿ ಸ್ಟಿಕ್ಕರ್ ತೆಗೆಯದ ಹೊಸ ಚಪ್ಪಲಿ ಇರುವ ಬಗ್ಗೆಯೂ ಚರ್ಚೆಯಾಗಿದೆ. ಮೃತರ ಕುಟುಂಬಕ್ಕೆ ಕರ್ನಾಟಕ ಸರ್ಕಾರ 1 ಕೋಟಿ ರೂಪಾಯಿ ಪರಿಹಾರ ನೀಡಬೇಕು ಮತ್ತು ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ತಮಿಳುನಾಡು ಶಾಸಕರು ಆಗ್ರಹಿಸಿದರು.

## ಸಮಿತಿ ರಚನೆ: ಸುಪ್ರೀಂ ಆದೇಶ

ಮತ್ತು ವಿ ಮೋಹನ ಅವರ ಪೀಠ ಹೇಳಿದೆ. ಜುಲೈ 20 ರಂದು ದೆಹಲಿಯಲ್ಲಿ ನಡೆದ ಸಂಸತ್ ಮೆರವಣಿಗೆಯ ಸಮಯದಲ್ಲಿ ನಡೆದ ಹಿಂಸಾಚಾರದ ವೀಡಿಯೊ ದೃಶ್ಯಾವಳಿಗಳು ಮತ್ತು ಸಿಸಿಟಿವಿ ರೆಕಾರ್ಡಿಂಗ್‌ಗಳನ್ನು ಪರಿಶೀಲನೆಗಾಗಿ ಉನ್ನತಾಧಿಕಾರ ಸಮಿತಿಗೆ ಹಸ್ತಾಂತರಿಸುವಂತೆ ನಿರ್ದೇಶಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

## ಬಸ್ ಟಿಕೆಟ್ ದರ ಏರಿಕೆ

ನೀಡುತ್ತಿದ್ದಾರೆ. ಶೀಘ್ರದಲ್ಲೇ ವರದಿ ಸಲ್ಲಿಸಲಿದ್ದಾರೆ. ಬಳಿಕ ಬಸ್ ಪ್ರಯಾಣ ದರ ಏರಿಕೆ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ಸಚಿವರು ಹೇಳಿದರು. ವರದಿಯನ್ನು ಸಂಪುಟ ಸಭೆ ಮುಂದೆ ಇಟ್ಟು, ನಂತರ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ.

## ದೇವೇಗೌಡರ ವಾಗ್ದಾಳಿ

ಹೆಸರಲ್ಲಿ ಹಣ ಲೂಟಿ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ನೈಸ್ ವಿರುದ್ಧ ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದು ಎಚ್.ಡಿ.ದೇವೇಗೌಡ ಎಚ್ಚರಿಕೆ ನೀಡಿದರು.

## ಶೂಟೌಟ್: ಹೊಸ ಚಪ್ಪಲಿ ಪತ್ತೆ!

ಸ್ಥಳದಲ್ಲಿ ಪತ್ತೆಯಾದ ಪ್ಯಾರಗಾನ್ ಕಂಪನಿಯ ಹೊಸ ಜೋಡಿ ಚಪ್ಪಲಿ ಈಗ ಪ್ರಕರಣದ ಪ್ರಮುಖ ಚರ್ಚೆ ವಿಷಯವಾಗಿದೆ.

**ನಗರಸಭಾ ಕಾರ್ಯಾಲಯ, ನಂಜನಗೂಡು**
ಮೈಸೂರು ಜಿಲ್ಲೆ, ಮೈಸೂರು, ದೂರವಾಣಿ: 08221-226236/08221-226888
ಇ-ಮೇಲ್: itstaff_ulb_nanjangud@yahoo.co.in ವೆಬ್‌ಸೈಟ್ : www.nanjanaguducity.mrc.gov.in
ಸಂ: ನನಕಾ/ತಾಂತ್ರಿಕಶಾಖೆ/ಸ.ಇಂ/ಟೆಂ-09/2026-27 ದಿನಾಂಕ: 17.08.2026

**ಟೆಂಡರ್ ಪ್ರಕಟಣೆ-2ನೇ ಕರೆ** (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2026-27ನೇ ನಗರಸಭಾ ಅನುದಾನದಲ್ಲಿ ಅನುಮೋದನೆಗೊಂಡಿರುವ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ ಅರ್ಹ ಟೆಂಡರ್‌ದಾರರು KTTP ನಿಯಮಗಳ ಅನ್ವಯ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **1) ಇಡೆಂಟ್‌ನಂ: DMA/2026-27/OW/WORK_INDENT/61704** ಅಂದಾಜು ಮೊತ್ತ ರೂ. 10.00 ಲಕ್ಷಗಳು. **2) ಇಡೆಂಟ್‌ನಂ: DMA/2026-27/OW/WORK_INDENT61705** ಅಂದಾಜು ಮೊತ್ತ ರೂ. 14.85 ಲಕ್ಷಗಳು. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು **https://kppp.karnataka.gov.in** ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ: 02.09.2026** ಹಾಗೂ ಟೆಂಡರ್ ತೆರೆಯುವ ದಿನಾಂಕ: **03.09.2026**. ಟೆಂಡರ್ ನಿಬಂಧನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

**ಸೂಚನೆ:-** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-
**(ಲಕ್ಷ್ಮೀಕಾಂತ ರೆಡ್ಡಿ. ಜಿ.** ಐ.ಎ.ಎಸ್)
ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು
ನಗರಸಭೆ, ನಂಜನಗೂಡು.

ಸಹಿ/-
**(ಬಸವರಾಜು.ಎಂ.** ಕೆ.ಎಂ.ಎ.ಎಸ್.)
ಪೌರಾಯುಕ್ತರು
ನಗರಸಭೆ, ನಂಜನಗೂಡು.

DIPR/MYS/583/SA/2026-27

# ಅಭಿವೃದ್ಧಿಯಲ್ಲ, ರೈತರ ಮರಣಶಾಸನ

## ರೈತರನ್ನು ಹೆದರಿಸಿ, ಬೆದರಿಸಿ ಆತಂಕ ಸೃಷ್ಟಿಸಲು ಒಂದು ವರ್ಗವನ್ನೇ ಸೃಷ್ಟಿ ಮಾಡಿದ್ದಾರೆ ರಿಯಲ್ ಎಸ್ಟೇಟ್ ಮಾಫಿಯಾಕ್ಕಾಗಿ ಭೂಸ್ವಾಧೀನ: ನಿಖಿಲ್ ಕುಮಾರಸ್ವಾಮಿ ಆರೋಪ



ಬೆಂಗಳೂರು: ಬಿಡದಿ ಹೋಬಳಿಯಲ್ಲಿ ರಾಜ್ಯ ಸರ್ಕಾರ ಉದ್ದೇಶಿಸಿರುವ ಸಮಗ್ರ ನಗರ ಯೋಜನೆಯನ್ನು ವಿರೋಧಿಸಿ ಮಂಗಳವಾರ ಜೆಡಿಎಸ್ ಪಕ್ಷ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಭೆ ಆಯೋಜಿಸಿತ್ತು.

ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಗಡಿ ಮಾಜಿ ಶಾಸಕ ಎ.ಮಂಜುನಾಥ್ ನೇತೃತ್ವದಲ್ಲಿ ಸಾವಿರಾರು ರೈತರು ಭಾಗವಹಿಸಿ ಘೋಷಣೆ ಕೂಗಿದರು.

### ಅಭಿವೃದ್ಧಿ ಹೆಸರಿನಲ್ಲಿ ರೈತರ ಮರಣಶಾಸನ

ಸಭೆಯನ್ನುದ್ದೇಶಿಸಿ ಮಾತನಾಡಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ರಿಯಲ್ ಎಸ್ಟೇಟ್ ಮಾಫಿಯ ದಿಂದ ಪ್ರಭಾವಿತರಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರ ಫಲವತ್ತಾದ ಭೂಮಿಯನ್ನು ಕಸಿಯುತ್ತಿದೆ. ಅಭಿವೃದ್ಧಿ ಹೆಸರಲ್ಲಿ ರೈತರ ಮರಣಶಾಸನ ಬರೆಯಲು ಹೊರಟಿದೆ. ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮಾತಾಡುತ್ತಿದ್ದೀರಾ? ನೇರವಾಗಿ ಸಿಎಂ ಡಿಕೆ ಶಿವಕುಮಾರ್ ಪ್ರಶ್ನಿಸಿದರು.

ಜಿಲ್ಲೆಯ ನಾಲ್ವರು ಶಾಸಕರ ಪೈಕಿ ಒಬ್ಬರಿಗೆ ಸಚಿವ ಸ್ಥಾನ ನೀಡಿದ್ದಾರೆ. ಆದರೆ ಜನರ ಕಷ್ಟ ಕೇಳುವ ಕೆಲಸ ಸಚಿವರು ಮಾಡುತ್ತಿಲ್ಲ. ಈ ಯೋಜನೆ ರೂಪುಗೊಂಡಾಗ ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಿರಲಿಲ್ಲ. ಸಿಎಂ ಕುರ್ಚಿ ನೋಡಿ ಹೊಟ್ಟೆ ಕಿಚ್ಚು ಪಡುವ ಜಾಯಮಾನ ನಮ್ಮದಲ್ಲ ಎಂದು ಸ್ಪಷ್ಟಪಡಿಸಿದರು.

> **ಸರ್ಕಾರದ ದ್ವಂದ್ವ ನೀತಿ ಆರೋಪ**
>
> ನೀವು ಮುಖ್ಯಮಂತ್ರಿಯಾಗುವುದಕ್ಕೂ ಮುಂಚಿನಿಂದಲೂ ಅಂದರೆ ಕಳೆದ 526 ದಿನಗಳಿಂದ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೂ ಅವರ ಅಹವಾಲನ್ನು ಕೇಳಿಲ್ಲ. ಒಕ್ಕಲುತನ ಮಾಡುವ ರೈತರ ರಕ್ಷಣೆಗಾಗಿ ನಮ್ಮ ಕುಟುಂಬ ಒತ್ತು ನೀಡಿ ಪ್ರತಿಭಟನೆಗೆ ಬೆಂಬಲ ನೀಡಿದೆ" ಎಂದರು.

### ನಾವು ಅಭಿವೃದ್ಧಿ ವಿರೋಧಿಗಳಲ್ಲ

ನಾವು ಅಭಿವೃದ್ಧಿ ವಿರೋಧಿಗಳಲ್ಲ. ಉಪನಗರ ಯೋಜನೆ ಮಾಡಲೇಬೇಕೆಂದಿದ್ದರೆ ಕೆಐಎಡಿಬಿಯಲ್ಲಿ ಲಭ್ಯವಿರುವ ಬರಡು ಭೂಮಿಯನ್ನು ಬಳಸಿಕೊಳ್ಳಿ. ಅಲ್ಲಿ ಸ್ಮಾರ್ಟ್ ಸಿಟಿ ಮಾಡಲು ನಾವು ಸಿದ್ಧ. ಆದರೆ ಸಣ್ಣ, ಅತಿ ಸಣ್ಣ ರೈತರ ಹೈನುಗಾರಿಕೆ, ಕೃಷಿ ಭೂಮಿ ಕಸಿಯಬೇಡಿ ಎಂದು ಆಗ್ರಹಿಸಿದರು. ಎಕರೆ ಭೂಮಿಗೆ 3 ಕೋಟಿವರೆಗೆ ಪರಿಹಾರ ಕೊಡುವುದಾಗಿ ಹೇಳುತ್ತಿದ್ದಾರೆ. ಆದರೆ ರೈತರ ಬದುಕು, ಜೀವನೋಪಾಯ ಹಾಳಾಗುತ್ತಿದೆ. ದಯವಿಟ್ಟು ಅವರನ್ನು ಬದುಕಲು ಬಿಡಿ" ಎಂದು ನಿಖಿಲ್ ಕುಮಾರಸಾಮಿ ಅವರು ಮನವಿ ಮಾಡಿದರು.

### ಕಾಂಗ್ರೆಸ್‌ನ ಸತ್ಯಶೋಧನಾ ಸಮಿತಿ ವಿರೋಧವಿತ್ತು

ಕಾಂಗ್ರೆಸ್‌ನ ಸತ್ಯಶೋಧನಾ ಸಮಿತಿಯ 200 ಪುಟದ ವರದಿಯೇ ಟೌನ್‌ಶಿಪ್‌ಗೆ ವಿರೋಧ ವ್ಯಕ್ತಪಡಿಸಿದೆ. ಆ ವರದಿಗೆ ಬೆಲೆಯೇ ಇಲ್ಲವೇ? ಮತ್ತೆ ಏಕೆ ಪರಿಶೀಲನಾ ಸಮಿತಿ ಬೇಕು? ಜಿಬಿಎ ಪ್ರಾಧಿಕಾರ ರಚಿಸಿ 2025 ರಲ್ಲಿ ಅಧಿಸೂಚನೆ ಹೊರಡಿಸಿದ್ದಾರೆ. ದೇವೇಗೌಡರು ಸತ್ಯಾಗ್ರಹ ಎಚ್ಚರಿಕೆ ನೀಡಿದ ಮರುದಿನ ಪರಿಶೀಲನಾ ಸಮಿತಿ ಮಾಡುವುದಾಗಿ ಹೇಳಿ, ಅದೇ ದಿನ ಅಂತಿಮ ಅಧಿಸೂಚನೆ ಹೊರಡಿಸಿದ್ದಾರೆ. ಇದು ಸರ್ಕಾರದ ದ್ವಂದ್ವ ನೀತಿಗೆ ಸಾಕ್ಷಿ" ಎಂದು ಆರೋಪಿಸಿದರು. ಒತ್ತಾಯಪೂರ್ವಕವಾಗಿ ರೈತರಿಂದ ಭೂಸ್ವಾಧೀನ ಮಾಡಿಕೊಳ್ಳುವುದನ್ನು ಕೈಬಿಡಬೇಕು" ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರು, ಮಾಜಿ ಹಾಗೂ ಹಾಲಿ ಶಾಸಕರು, ಸಂಸದರು, ಪಕ್ಷದ ಜಿಲ್ಲಾಧ್ಯಕ್ಷರು ಮತ್ತು ರೈತ ಮುಖಂಡರು, ಸಹಸ್ರಾರು ಸಂಖ್ಯೆಯಲ್ಲಿ ರೈತರು ಉಪಸ್ಥಿತರಿದ್ದರು.

> **ಗೌಡರು ಆಸ್ಪತ್ರೆಗೆ ಹೋಗದೆ ರೈತರ ಪರ ಬಂದಿದ್ದಾರೆ**
>
> 93 ವರ್ಷದ ಮಾಜಿ ಪ್ರಧಾನಿ ದೇವೇಗೌಡರು ಬೆಳಗ್ಗೆ ಡಯಾಲಿಸಿಸ್ ಇದ್ದರೂ "ರೈತರು ಮೊದಲು, ಆ ನಂತರ ಆಸ್ಪತ್ರೆಗೆ ಹೋಗುತ್ತೇನೆ" ಎಂದು ಹೋರಾಟಕ್ಕೆ ಬಂದಿದ್ದಾರೆ ಎಂದು ನಿಖಿಲ್ ತಿಳಿಸಿದರು.

> **ಇದು ಕುಮಾರಸ್ವಾಮಿ ಅವರ ಕೂಸಲ್ಲ**
>
> ಇದು ಕುಮಾರಸ್ವಾಮಿ ಅವರ ಕನಸಿನ ಕೂಸು ಎಂಬ ಸಚಿವ ಎಚ್.ಸಿ.ಬಾಲಕೃಷ್ಣ ಅವರ ಹೇಳಿಕೆಗೆ ತಿರುಗೇಟು ನೀಡಿದ ನಿಖಿಲ್, "2006 ರಲ್ಲಿ ಯೋಜನೆ ಪ್ರಸ್ತಾಪವಾದಾಗ ಕುಮಾರಸ್ವಾಮಿ ಅವರು ರೈತರೊಂದಿಗೆ 3 ಸಭೆ ನಡೆಸಿದರು. ರೈತ ಮಹಿಳೆಯೊಬ್ಬರು ವಿರೋಧಿಸಿದಾಗ 2007ರ ಆಗಸ್ಟ್ 1 ರಂದು ವಿಧಾನಸಭೆಯಲ್ಲಿ ಯೋಜನೆ ಕೈಬಿಟ್ಟಿರುವುದಾಗಿ ಘೋಷಿಸಿದರು. ಅದರ ದಾಖಲೆ ಇಂದಿಗೂ ಇದೆ. ಆದ್ದರಿಂದ ಇದು ಕುಮಾರಸ್ವಾಮಿ ಅವರ ಕೂಸಲ್ಲ ಎಂದು ಹೇಳಿದರು.

## ಬೀಜಗಳ ಸರಬರಾಜು ನಿಲ್ಲಿಸಿ




ಸರಗೂರು: ರಾಗಿ, ಅವರೆ, ಅಲಸಂದೆ, ಉದ್ದು ಸೇರಿದಂತೆ ದ್ವಿದಳ ಧಾನ್ಯ ಬೆಳೆಯುವ ಪರ್ಯಾಯ ವ್ಯವಸ್ಥೆಯಿಂದ, ಮುಸುಕಿನ ಜೋಳದ ಬಿಳಿ ಸುಳಿ ರೋಗ ಬಾಧೆಯಿಂದ ರೈತರು ಪಾರಾಗಬಹುದು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್.ರವಿ ತಿಳಿಸಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟಿನ ಜನಧ್ವನಿ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಮಾತನಾಡಿ, ವರ್ಷಕ್ಕೆ ಮೂರು ಬಾರಿ ಮುಸುಕಿನ ಜೋಳ ಬೆಳೆಯುತ್ತಿರು ವುದರಿಂದ, ಬಿಳಿಸುಳಿರೋಗ ಕಂಡು ಬರುತ್ತಿದೆ. ಇದು ಅಂಟು ರೋಗವಾಗಿ ಮಾರ್ಪಟ್ಟಿದ್ದು ನಿರ್ವಹಣೆ ಮಾಡುವುದು ಕಷ್ಟವಾಗಿದೆ. ಬೆಳೆ ಬದಲಾವಣೆಯೇ ಬಿಳಿಸುಳಿರೋಗವನ್ನು ನಿರ್ಮೂಲನೆಗೆ ಮಾರ್ಗ ಆದ್ದರಿಂದ, ಕೆಲವು ವರ್ಷಗಳ ಕಾಲ ಮುಸುಕಿನ ಜೋಳದ ಬಿತ್ತನೆ ಬೀಜಗಳ ಸರಬರಾಜನ್ನು ನಿಲ್ಲಿಸುವಂತೆ ಕೃಷಿ ಆಯುಕ್ತರ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮಕ್ಕೆ ತಾಲೂಕಿನ ರೈತರಾದ ನೂರಾಳ್ಳಯ್ಯ, ನಾಗರಾಜು, ವಿಠ್ಠಲ, ಗುರುಸ್ವಾಮಿ, ಪ್ರಕಾಶ್, ನಾಗರಾಜು, ಸುನಂದ, ಸಿದ್ದರಾಜು, ಮಹೇಶ್ ಮಲ್ಲೇಶ ಮುಂತಾದವರು ಕರೆಮಾಡಿ ಮಾಹಿತಿಗಳನ್ನು ಪಡೆದುಕೊಂಡರು.

ಜನಧ್ವನಿ ಬಾನುಲಿ ಕೇಂದ್ರದ ವ್ಯವಸ್ಥಾಪಕ ನಿಂಗರಾಜು ಕಾರ್ಯಕ್ರಮ ನಡೆಸಿಕೊಟ್ಟರು. ಹೆಚ್.ಡಿ.ಕೋಟೆ ಕೃಷಿ ಇಲಾಖೆಯ ಸಹಾಯಕ ನಿರ್ದೇಕ ಪ್ರಸಾದ್ ಜನಧ್ವನಿ ಬಾನುಲಿ ಕೇಂದ್ರದ ಸಿಬ್ಬಂದಿಗಳಾದ ಶ್ರೀಕಾಂತ್, ಅನಿತಾ, ಸ್ಫೂರ್ತಿ ಪ್ರಕಾಶ್, ಪ್ರೀತಿ ಹಾಗೂ ಯತೀಶ್ ಇದ್ದರು.

## 26ಕ್ಕೆ ಗರಡಿಯ ಮಟ್ಟಿಪೂಜೆ ಕಾರ್ಯಕ್ರಮ




ಮೈಸೂರು: ಕನ್ನೇಗೌಡನ ಕೊಪ್ಪಲಿನ ಶ್ರೀರಾಮ ಸೇವಾ ಟ್ರಸ್ಟ್, ಶ್ರೀರಾಮಮಂದಿರ ಹೊಸ ಬೀದಿ ಹತ್ತೂ ಜನಗಳ ಗರಡಿ ವತಿಯಿಂದ ಆ.26ರಂದು ಸಂಜೆ 7ಕ್ಕೆ ಗರಡಿಯ ನಾಡ ಕುಸ್ತಿಯ ಮಟ್ಟಿಪೂಜೆ- ಅಂಬಾ ತಾಯಿ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಬಡಾವಣೆ ಮುಖಂಡ ಹಾಗೂ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂ.ರಾಮೇಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈಚಿನ ದಿನಗಳಲ್ಲಿ ಕುಸ್ತಿ ನಶಿಸುತ್ತಿದೆ. ಆದರೆ ಕೆ.ಜಿ. ಕೊಪ್ಪಲಿನ ಆರು ಗರಡಿಗಳಲ್ಲಿ ಯಾವುದೂ ಸಹಾ ಇನ್ನೂ ಮುಚ್ಚಿಲ್ಲ. ಇಲ್ಲಿ ಕುಸ್ತಿ ಸಕ್ರಿಯವಾಗಿದೆ. ಇನ್ನೂ ಹೆಚ್ಚು ಮಂದಿ ಕುಸ್ತಿಯತ್ತ ಆಕರ್ಷಿತರಾಗುವಂತೆ ಮಾಡುವ ಯತ್ನವಾಗಿ ಈ ಮಟ್ಟಿಪೂಜೆ ನಡೆಯುತ್ತಿದೆ ಎಂದರು.

ಇದಕ್ಕೂ ಮುನ್ನ ಆ.21ರಂದು ಸಂಜೆ 4ಕ್ಕೆ ಸಮೀಪದ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನದಿಂದ ನಾಡಕುಸ್ತಿಯ ಮಟ್ಟಿಯನ್ನು ಕಲಾತಂಡ ಹಾಗೂ ಮಂಗಳ ವಾದ್ಯದೊಂದಿಗೆ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಹೊರಟು ಗರಡಿಗೆ ತರಲಾಗುವುದು. ಶಾಸಕ ಕೆ.ಹರೀಶ್‌ಗೌಡ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡುವರೆಂದರು. ಪಾಲಿಕೆ ಮಾಜಿ ಸದಸ್ಯ ಚನ್ನಪ್ಪ, ಎಚ್.ಈರಯ್ಯ, ದೊಡ್ಡನಿಂಗಣ್ಣ, ಆರ್.ರಾಜ್‌ಕುಮಾರ್, ಲಕ್ಷ್ಮೀನಾರಾಯಣ, ಎಲ್.ಚಂದ್ರು ಹಾಜರಿದ್ದರು.

ಮೊದಲ ಪುಟದಿಂದ

## ಸಿಎಂಗೆ ಪಂಥಾಹ್ವಾನ

ಟೇಕ್ ಓವರ್ ಮಾಡೋಕೆ ಮುಂದಾಗಿದ್ದಾರೆ. ನೈಸ್ ಕಂಪನಿ ಒಂದು ರೂಪಾಯಿ ಯೋಜನೆಗೆ ಹಾಕಿಲ್ಲ. ರೈತರಿಗೆ ಪರಿಹಾರ ಕೊಟ್ಟಿಲ್ಲ. ಸರ್ಕಾರದ ಭೂಮಿ ಬ್ಯಾಂಕ್‌ನಲ್ಲಿ ಅಡವಿಟ್ಟು ಹಣ ತಂದು ನೈಸ್ ಯೋಜನೆ ಮಾಡಿದ್ದಾರೆ. 2002ರಿಂದಲೂ ದೇವೇಗೌಡರು ನೈಸ್ ವಿರುದ್ಧ ಹೋರಾಡುತ್ತಿದ್ದಾರೆ. ಈಗ ದೇವೇಗೌಡರ ಅವರನ್ನು ಪ್ರಶ್ನೆ ಮಾಡ್ತೀರಾ? ಅವರ ಉಗುರಿಗೆ ನೀವು ಸಮ ಅಲ್ಲ. ಅಲ್ಲದೇ ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ ನೈಸ್ ಭೂಮಿ ರೈತರಿಗೆ ವಾಪಸ್ ಕೊಡಿ. ದೆಹಲಿಯಲ್ಲಿ ಆದ ರೈತರ ಹೋರಾಟದ ರೀತಿ ಆಗಬೇಕು. ಧೈರ್ಯವಿದ್ದರೆ ನೇರವಾಗಿ ಚರ್ಚೆಗೆ ಬನ್ನಿ ಎಂದು ಗುಡುಗಿದರು. ವಿಧಾನಸೌಧ ಮುತ್ತಿಗೆಯನ್ನು ಜೆಡಿಎಸ್ ಕೈಬಿಟ್ಟಿದೆ. ಕಾನೂನಿಗೆ ಗೌರವ ಕೊಟ್ಟು ವಿಧಾನಸೌಧ ಮುತ್ತಿಗೆ ಕೈ ಬಿಟ್ಟಿದ್ದೇವೆ. ಆದರೆ ಯೋಜನೆಗಳ ವಿರುದ್ಧ ನಮ್ಮ ಹೋರಾಟ. ರೈತರ ಪರವಾಗಿ ನಮ್ಮ ಹೋರಾಟ ಮುಂದುವರೆಯುವುದಾಗಿ ಕುಮಾರಸ್ವಾಮಿ ತಿಳಿಸಿದರು. ಸರ್ಕಾರದ ವಿರುದ್ಧ ಜೆಡಿಎಸ್ ಯುವನಾಯಕ ನಿಖಿಲ್ ಸಹ ವಾಗ್ದಾಳಿ ನಡೆಸಿದರು. ರಿಯಲ್ ಎಸ್ಟೇಟ್ ಮಾಫಿಯಾ ಮಾಡೋಕೆ ಸರ್ಕಾರ ಜಮೀನು ಕಸಿಯುತ್ತಿದೆ. ಜಿಲ್ಲೆಯ 4 ಶಾಸಕರಿಗೆ ಆಶೀರ್ವಾದ ಮಾಡಿದ್ದಾರೆ. ಸಚಿವರು ಆಗಿದ್ದಾರೆ. ಆದರೆ ಜನರ ಕಷ್ಟ ಕೇಳುವ ಕೆಲಸವನ್ನು ಶಾಸಕರು ಮತ್ತು ಸಚಿವರು ಮಾಡ್ತಿಲ್ಲ. ಈ ಯೋಜನೆ ಆದಾಗ ಡಿಕೆಶಿ ಅವರು ಸಿಎಂ ಆಗಿರಲಿಲ್ಲ. ಸಿಎಂ ಕುರ್ಚಿ ನೋಡಿ ಹೊಟ್ಟೆ ಕಿಚ್ಚು ಬೀಳುವ

## ಕಬ್ಬು ಬೆಳೆಗಾರ ಸಂಘದಿಂದ ಮಕ್ಕಳಿಗೆ ತಟ್ಟೆ ವಿತರಣೆ



ಚಾಮರಾಜನಗರ; ಸರ್ಕಾರಿ ಶಾಲೆಗಳ ಬೆಳವಣಿಗೆಗೆ ದಾನಿಗಳ ನೆರವು ಅಗತ್ಯ ವಾಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ವಿಭಾಗದ ಮಕ್ಕಳಿಗೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ದಾನಿಗಳಾದ ಕೆಂಡಗಣ್ಣ ಸ್ವಾಮಿ, ಡಾ.ಸಿ.ಪಿ. ಕಾತ್ಯಾಯಿಣಿ. ಮತ್ತು ಎಸ್.ಮಿನಾಕ್ಷಿ ಜೆ.ಎಸ್.ಎಸ್. ದಂತ ಮಹಾವಿದ್ಯಾಲಯ ಮೈಸೂರು, ಟಿ.ವಿ.ಗೋಪಿನಾಥ್ ಇವರುಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ತಟ್ಟೆ ವಿತರಿಸಿ ಮಾತನಾಡಿದರು. ಪರಿಸರ ದಿನಾಚರಣೆ ಕಾರ್ಯಕ್ರಮದ ಪ್ರಯುಕ್ತ ಶಾಲಾಆವರಣದಲ್ಲಿ ಸಸಿ ನೆಡಲು ಬಂದಂತಹ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಶಾಲೆಗೆ ಶುದ್ಧ ಕುಡಿಯುವ ನೀರು, ತಟ್ಟೆ ಕೊಡಿಸುವಂತೆ ಮಾಡಿಕೊಂಡಿದ್ದರು ಅದರಂತೆ ದಾನಿಗಳ ನೆರವಿನಿಂದ ಶಾಲೆ ಈ ಶಾಲೆಗೆ ಹಿಂದೆಯೇ ಕೂಡ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಇಂದು ಶಾಲೆ ಎಲ್ಲ ವಿದ್ಯಾರ್ಥಿಗಳಿಗೂ ತಟ್ಟೆ ವಿತರಿಸಲಾಗಿದೆ. ಸರ್ಕಾರದ ಸವಲತ್ತುಗ ಳೊಂದಿಗೆ ದಾನಿಗಳು ನೆರವು ನೀಡಿದರೆ ಶಾಲೆಗಳು ಅಭಿವೃದ್ಧಿ ಹೊಂದಲು ಸಾಧ್ಯವಾ ಗುತ್ತದೆ ಎಂದರು.

ಶಿಕ್ಷಕರು ಮಕ್ಕಳಿಗೆ ಚೆನ್ನಾಗಿ ಪಾಠಪ್ರವಚನ ಹೇಳಿಕೊಡುವ ಜೊತೆಗೆ ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಅವರ ಪ್ರೋತ್ಸಾಹ ನೀಡಿದರೆ ಮುಂದಿನ ದಿನಗಳಲ್ಲಿ ನಿಮ್ಮ ವಿದ್ಯಾರ್ಥಿಗಳು ಶಾಶ್ವತವಾಗಿ ನೆನೆದುಕೊಳ್ಳುತ್ತಾರೆ ಎಂದರು.

ಪ್ರಗತಿಪರ ರೈತ ಕೆಂಡಗಣ್ಣುಸ್ವಾಮಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹಾದೇವಸ್ವಾಮಿ, ತಾಲೂಕು ಅಧ್ಯಕ್ಷ ನಂಜನಪುರ ಸತೀಶ್, ಉಪಾಧ್ಯಕ್ಷ ಹೆಗ್ಗೋಠಾರ ಶಿವಸ್ವಾಮಿ, ಕಾರ್ಯದರ್ಶಿ ಉಡಿಗಾಲ ಸುಂದ್ರಪ್ಪ, ಉಪ ಪ್ರಾಂಶುಪಾಲ ಶೀಲಾರಾಣಿ ಶಿಕ್ಷಕಿ ಎನ್. ಗೌರಮ್ಮ ಶಿಕ್ಷಕ ಮಲ್ಲೇಶ್, ಶಿಕ್ಷಕರು, ಮಕ್ಕಳು ಹಾಜರಿದ್ದರು.

ಮೊದಲ ಪುಟದಿಂದ

## ಎರಡನೇ ದರ್ಜೆಗೆ ತರುವ ಯತ್ನ

ರಾಷ್ಟ್ರಚಿಹ್ನೆಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಪಮಾನ ಮಾಡಿದೆ ಎಂದು ಟೀಕಿಸಿದರು. ಆರ್‌ಎಸ್‌ಎಸ್ ಹಾಗೂ ಹಿಂದೂ ಮಹಾಸಭಾದ ಚಟುವಟಿಕೆಗಳನ್ನು ಪ್ರಸ್ತಾಪಿಸಿದ ಹರಿಪ್ರಸಾದ್, ಸದಾ ವತ್ಸಲೇಯನ್ನು ರಾಷ್ಟ್ರಗೀತೆ ಎಂದು ಪರಿಗಣಿಸಬಹುದೇ ಎಂದು ಪ್ರಶ್ನಿಸಿದರು. ಆಜಾದ್ ಹಿಂದ್ ಜಿಂದಾಬಾದ್, ಇಂಕಲಾಬ್ ಜಿಂದಾಬಾದ್ ಘೋಷಣೆಗಳನ್ನು ಬಿಜೆಪಿಯವರು ಕೂಗುತ್ತಾರೆಯೇ ಎಂದು ಪ್ರಶ್ನಿಸಿದ ಅವರು, ವಂದೇ ಮಾತರಂ ವಿಚಾರವನ್ನು ಮುಂದಿಟ್ಟುಕೊಂಡು ದೇಶದಲ್ಲಿ ಸೌಹಾರ್ದತೆ ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ ಎಂದರು.

## ದೇಶ ಬಿಟ್ಟು ಹೋಗಿ

ಇರಕೂಡದು. ನೀವು ಕೂಡಾ ಮುಸಲ್ಮಾನರ ಜೊತೆ ತೊಲಗಿಬಿಡಿ. ಕಾಂಗ್ರೆಸ್‌ನದ್ದು ಎಷ್ಟು ನೀಚತನದ ಪರಮಾವಧಿ. ಮುಸಲ್ಮಾನರಿಗೆ ನೋವಾಗುತ್ತದೆ. ಗೀತೆಯಲ್ಲಿ ದುರ್ಗೆ ಬರುತ್ತಾಳೆ ಅಂತಾ ವಂದೇ ಮಾತರಂ ತುಂಡು ಮಾಡಿದೆ ಕಾಂಗ್ರೆಸ್. ಮುಸಲ್ಮಾನರಿಗಾಗಿ ಇರುವ ಕಾಂಗ್ರೆಸ್ ದೇಶಕ್ಕೆ ಅವಶ್ಯಕತೆ ಇಲ್ಲ ಎಂದು ವಾಗ್ದಾಳಿ ನಡೆಸಿದರು. ಅಲ್ಲಾಹ್ ಬಗ್ಗೆ ಹೇಳಿದಾಗ ಹಿಂದೂಗಳು ಸಹಿಸಿಕೊಂಡಿಲ್ಲವೇ? ಆಜಾನ್ ಕೂಗಿದಾಗ ಹಿಂದೂಗಳು ಸಹಿಸಿಕೊಂಡು ಸುಮ್ಮನೆ ಇಲ್ಲವೇ? ಕಾಂಗ್ರೆಸ್ ಹಿಂದೂ ವಿರೋಧಿ ಮನಸ್ಥಿತಿ ವಿರುದ್ಧ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

### ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ

## ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ



ಮೈಸೂರು: ಶೃಂಗೇರಿ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ 34ನೇ ಜನ್ಮದಿನೋತ್ಸವದ ಪ್ರಯುಕ್ತ ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ನಿರುದ್ಯೋಗಿ ಬಡ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಮಂಗಳವಾರ ಬೆಳಗ್ಗೆ ವಿಜಯನಗರ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ನಡೆದ ಸಮಾರಂಭದಲ್ಲಿ ದೇವಾಲಯದ ಆಡಳಿತಾಧಿಕಾರಿಗಳಾದ ಶ್ರೀ ಶ್ರೀನಿವಾಸ್ ಗುರೂಜಿ ಅವರು ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಶ್ರೀನಿವಾಸ ಗುರೂಜಿ ಮಾತನಾಡಿ, ಕನ್ನಡಾಂಬೆ ರಕ್ಷಣಾ ವೇದಿಕೆಯ ಈ ಕಾರ್ಯಕ್ರಮ ಸಮಾಜಮುಖಿ, ಸತ್ಕಾರ್ಯವಾಗಿದ್ದು, ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಾರ್ಯಕ್ರಮವಾಗಿದೆ. ಇದರಿಂದ ನಿರುದ್ಯೋಗಿ ಬಡ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಿದೆ. ಈಗ ನೀಡಿರುವ ಹೊಲಿಗೆ ಯಂತ್ರಗಳಿಂದ ತಮ್ಮ ವೃತ್ತಿಯನ್ನು ಪ್ರಾರಂಭಿಸಿ ಬದುಕು ಕಟ್ಟಿಕೊಳ್ಳಬಹುದು, ಸ್ವಾವಲಂಬಿಗಳಾಗಿ ಬದುಕಬಹುದು. ಇದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದು ಹೇಳಿದರು. ಬಡವರಿಗೆ ಅನ್ನ ನೀಡಿದರೆ ಶಕ್ತಿ, ಆದಾಯ ತರುವ ಉದ್ಯೋಗ ನೀಡಿದರೆ ಒಂದು ಕೆಲಸವೇ ಸಿಕ್ಕಿದ ಹಾಗೆ, ಇಂತಹ ಕಾರ್ಯಕ್ರಮಗಳು ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ನಿರಂತರವಾಗಿ ನಡೆಯಲಿ, ಶ್ರೀ ಯೋಗಾನರಸಿಂಹಸ್ವಾಮಿ ಮತ್ತು ಶ್ರೀ ಭಾಷ್ಯಂ ಸ್ವಾಮೀಜಿ ಅವರ ಆಶೀರ್ವಾದ ಸದಾ ಅವರ ಮೇಲಿರುತ್ತದೆ ಎಂದು ನುಡಿದರು.

ಜೀವನ ನಡೆಸಲು ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದ ಬಡ ಕುಟುಂಬದ ಮಹಿಳೆಯರಿಗೆ ಇಂದು ಹೊಲಿಗೆ ಯಂತ್ರ ನೀಡಿರುವ ಕಾರಣ ಅವರು ಮುಂದಿನ ದಿನಗಳಲ್ಲಿ ಸ್ವಂತ ಉದ್ಯಮ ಪ್ರಾರಂಭಿಸಿ, ಬದುಕು ಕಟ್ಟಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಅಧ್ಯಕ್ಷರಾದ ರಾಜಶೇಖರ್ ಅವರ ಸೇವಾಕಾರ್ಯ ಶ್ಲಾಘನೀಯ ಎಂದರು.

ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ದುಡಿಯುವ ಕೈಗೆ ಉದ್ಯೋಗ ನೀಡಿದರೆ, ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಎಲ್ಲರೂ ಇಂತಹ ಬಡ ನಿರುದ್ಯೋಗಿಗಳ ಬದುಕಿಗೆ ಆಸರೆಯಾಗಿ ನಿಂತರೆ ಸಮಾಜದಲ್ಲಿ ನಿರುದ್ಯೋಗದ ಸಮಸ್ಯೆಯೇ ಇರುವುದಿಲ್ಲ, ಕನ್ನಡಾಂಬೆ ರಕ್ಷಣಾ ವೇದಿಕೆ ಶೃಂಗೇರಿ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರ 34ನೇ ಜನ್ಮದಿನೋತ್ಸವದ ಪ್ರಯುಕ್ತ ಬಡ ಮಹಿಳೆಯರು ಸ್ವಾವಲಂಬಿಯಾಗಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡುತ್ತಿದ್ದು, ಫಲಾನುಭವಿಗಳಿಗೆ ಶೃಂಗೇರಿ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಮತ್ತು ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಮುಖ್ಯಸ್ಥರಾದ ಶ್ರೀ ಭಾಷ್ಯಂ ಸ್ವಾಮೀಜಿ ಅವರ ಆಶೀರ್ವಾದ ಇರುತ್ತದೆ, ಅವರ ಮುಂದಿನ ಬದುಕು ಸುಖಕರವಾಗಿರಲಿ ಎಂದು ಆಶಿಸಿದರು. ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯ ಖಜಾಂಜಿ ನಂಜುಂಡ, ರವಿಗೌಡ , ತಾರಾ ಜಿ, ವತ್ಸಲ, ಪರ್ವಿನ್ ತಾಜ್, ಶಶಿಕಲಾ, ನಾಗರಾಜ್ ಇವಿ, ಶಿವಕುಮಾರ್, ಉದಯಕುಮಾರ್, ಹರೀಶ, ಹೊನ್ನೇಗೌಡ, ಚೆನ್ನಪ್ಪ ನಾಯಕ್, ಜನಾರ್ದನ್, ನಾಗರಾಜ್, ಮಹದೇವ, ಶ್ರೀನಿವಾಸ್, ಶಿವಲಿಂಗಪ್ಪ ಇತರರು ಉಪಸ್ಥಿತರಿದ್ದರು.

# ಗ್ರಾಮ ಪಂಚಾಯತಿ ನೌಕರರಿಂದ ಪ್ರತಿಭಟನೆ



ಚಾಮರಾಜನಗರ. ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮಪಂಚಾಯಿತಿ ನೌಕರರ ಸಂಘದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾನಿರತರರು ಅಲ್ಲಿಂದ ಮೆರವಣಿಗೆ ಯಲ್ಲಿ ಪಚ್ಚಪ್ಪ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು. ಜಿಪಂ ಸಿಇಒ ಮೋನಾರೋತ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಸಿದ್ದರಾಜು ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರರು, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇ ಟರ್‌ಗಳು, ನೀರುಗಂಟಿಗಳು, ಜವಾನರು ಹಾಗೂ ಸ್ವಚ್ಛತಾಗಾರರರನ್ನು ಸರ್ಕಾರಿ ನೌಕರರೆಂದು ಘೋಷಿಸಬೇಕು. ಸೇವಾ ಹಿರಿತನ ಆಧರಿಸಿ 750, 1,500 ಹಾಗೂ 3,000 ರೂ. ಬಡ್ತಿ ನೀಡಬೇಕು ಎಂದು ಆಗ್ರಹಿಸಿದರು.

ನೌಕರರು ನಿವೃತ್ತಿ ಅಥವಾ ಮೃತಪಟ್ಟ ಸಂದರ್ಭದಲ್ಲಿ 6 ಲಕ್ಷ ಇಡುಗಂಟು ನೀಡಬೇಕು. ಗ್ರಾಮ ಪಂಚಾಯಿತಿ ಠರಾವಿನ ಮೂಲಕ ನೇಮಕಗೊಂಡು ಜಿಲ್ಲಾ ಪಂಚಾಯಿತಿ ಯಿಂದ ಅನುಮೋದನೆ ಪಡೆಯದ ಸಿಬ್ಬಂದಿಗೂ ಇಡಗಂಟು ನೀಡಲು ಆದೇಶಿಸಬೇಕು ಎಂದರು.ತರಬೇತಿ ಪಡೆದ ಎಲ್ಲ ಸ್ವಚ್ಛವಾಹಿನಿ ನೌಕರರಿಗೆ ಕೆಲಸ ನೀಡಬೇಕು. ಒಡಂಬಡಿಕೆ ಹಾಗೂ ವಾರ್ಷಿಕ ನವೀಕರಣ ಪದ್ಧತಿ ರದ್ದುಪಡಿಸಬೇಕು. 15ನೇ ಹಣಕಾಸು ಯೋಜನೆಯಡಿ ವೇತನ ಪಾವತಿಸಬೇಕು. ಪ್ರತಿ ಪಂಚಾಯಿತಿಗೆ ಒಬ್ಬ ಚಾಲಕನನ್ನು ಪರಿಗಣಿಸಿ 15 ಸಾವಿರ ವೇತನ ನಿಗದಿಪ ಡಿಸಬೇಕು ಎಂದು ಒತ್ತಾಯಿಸಿದರು.

ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಹುದ್ದೆ ಗಳನ್ನು ಭರ್ತಿ ಮಾಡಬೇಕು. ಗ್ರೇಡ್-1 ಕಾರ್ಯದರ್ಶಿ ಗಳಿಂದ ಪಿಡಿಒ ಹುದ್ದೆಗೆ ರಾಜ್ಯಮಟ್ಟದ ಬಡ್ತಿ ಪದ್ಧತಿ ಬದಲಿಸಿ ಜಿಲ್ಲಾ ಮಟ್ಟದಲ್ಲಿ ಬಡ್ತಿಗೆ ಅವಕಾಶಕಲ್ಪಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಅಮ್ಮನಪುರ ಸುರೇಶ್, ಜಿಲ್ಲಾ ಖಜಾಂಚಿ ದೊರೆಸ್ವಾಮಿ, ತಾಲೂಕು ಅಧ್ಯಕ್ಷ ಎನ್.ಕೃಷ್ಣ , ಪ್ರಧಾನ ಕಾರ್ಯದರ್ಶಿ ನಂದೀಶ್, ಯಳಂದೂರು ತಾಲೂಕು ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ಗುಂಡ್ಲುಪೇಟೆ ಅಧ್ಯಕ್ಷ ತಾಲೂಕು ರಾಜಣ್ಣ, ಕುದೇರು ರವೀಂದ್ರ ಇತರರು ಭಾಗವಹಿಸಿದ್ದರು.

# ಜಿಲ್ಲೆಗೆ 30 ವರ್ಷ: ಸಂಭ್ರಮಾಚರಣೆ



ಚಾಮರಾಜನಗರ. ಚಾಮರಾಜನಗರ ಜಿಲ್ಲೆಯಾಗಿ 30 ವರ್ಷ ತುಂಬಿದ ಹಿನ್ನಲೆಯಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಸಂಭ್ರಮಾ ಚರಣೆ' ಮಾಡಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಸಂಘಟನೆಯ ಪದಾಧಿಕಾರಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು

ಕಾರ್ಯಕ್ರಮ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಚಾಮರಾಜನಗರ ಜಿಲ್ಲೆಯಾಗಿ 30 ವರ್ಷಗಳ ತುಂಬಿದ ಹಿನ್ನೆಲೆಯಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಪಟಾಕಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಲಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಯಾ ಗಲು ಕನ್ನಡ ಚಳವಳಿಗಾರ ವಾಟಾಳ್ ನಾಗರಾಜು, ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್, ಹೆಚ್.ನಾಗಪ್ಪ, ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಎಸ್.ಜಯಣ್ಣ ಕಾರಣರಾಗಿದ್ದಾರೆ. ಜಿಲ್ಲೆಯು ಅಭಿವೃದ್ಧಿ ಹೊಂದಬೇಕಿದೆ ಎಂದರು.

ಈ ಸಂದರ್ಭದಲ್ಲಿ ನಿಜಧ್ವನಿ ಗೋವಿಂದರಾಜು, ಅಮಚವಾಡಿ ರಾಜು, ರಾಚಪ್ಪ, ತಾಂಡವಮೂರ್ತಿ, ಹೊಂಗನೂರು ಕೆಂಪರಾಜು, ಸುರೇಶ್ ಗೌಡ, ಶಿವಣ್ಣ ಹೊಸೂರು, ಆಟೋ ಲಿಂಗರಾಜು, ಶಿವು, ಆಟೋ ಸುರೇಶ್, ನಂಜುಂಡಶೆಟ್ಟಿ, ಮಹೇಶ್ ಗೌಡ, ಪರಿಸರ ನಾಗರಾಜು ಇತರರು ಹಾಜರಿದ್ದರು.

## ಶೂಟೌಟ್ ಪ್ರಕರಣ ಸೂಕ್ತ ತನಿಖೆಗೆ ವೇದಿಕೆ ಆಗ್ರಹ



ಮೈಸೂರು: ಹನೂರು ಅರಣ್ಯದಲ್ಲಿ ನಡೆದ ಶೂಟೌಟ್ ಪ್ರಕರಣವನ್ನು ಖಂಡಿಸಿ, ಸೂಕ್ತ ತನಿಖೆಗೆ ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆವತಿಯಿಂದ ಅರಣ್ಯ ಭವನ ಮುಂದೆ ಪ್ರತಿಭಟನೆ ನಡೆಸಲಾಯಿತು.

ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಆಭಯಾರಣ್ಯಗಳ ವ್ಯಾಪ್ತಿಗೆ ಬರುವ ಅರಣ್ಯದಂಚಿನ ಗ್ರಾಮಗಳಿಗೂ ಹಾಗೂ ಅರಣ್ಯ ಇಲಾಖೆ ನಡುವೆ ಸಾಮರಸ್ಯದ ಕೊರತೆ ಕಾಣುತ್ತಿದೆ. ಅದರಂತೆ ಚಾಮರಾಜನಗರ ಜಿಲ್ಲೆಯ ಹನೂರು ಅರಣ್ಯದಲ್ಲಿ ನಡೆದ ಕಾಡಂಚಿನ ಜನರ ಶೂಟೌಟ್ ಪ್ರಕರಣ ಇಡೀ ನಾಡನ್ನು ತಲ್ಲಣಗೊಳಿಸಿದೆ. ಶೂಟೌಟ್ ನಡೆದ ಸ್ಥಳದಲ್ಲಿ ಮಹಜರು ನಡೆಸದೇ ಚಾಮರಾಜನಗರ ಬಿಟ್ಟು ಮೈಸೂರಿಗೆ ಶೂಟೌಟ್ ಆದಾ ಮೃತ ದೇಹಗಳನ್ನು ತಂದಿದ್ದು, ಸಾರ್ವಜನಿಕ ವಲಯದಲ್ಲಿ ಅನುಮಾನಕ್ಕೆ ಕಾರಣವಾಗಿದೆ? ನಿರಂತರವಾಗಿ ಕಾಡಂಚಿನ ಜನರಿಗೂ ಹಾಗೂ ಅರಣ್ಯ ಇಲಾಖೆಗೂ ಸಾಮರಸ್ಯ ಇಲ್ಲದೆ ಸಂಘರ್ಷ ನಡೆಯುತ್ತಿರುವುದು. ಇತ್ತೀಚಿನ ದಿನಗಳಲ್ಲಿ ಈ ರೀತಿಯ ದುರ್ಘಟನೆಗಳಿಗೆ ಕಾರಣವಾಗಿದೆ. ಕಾಡಂಚಿನ ಜನರು ದನಕುರಿ ಮೇಯಿಸಲು ಸೌದೆ ತರಲು ಕಾಡನ್ನೇ ಅವಲಂಬಿಸಿದ್ದು, ಅತಿಕ್ರಮ ಪ್ರವೇಶವೆಂದು ಏಕಾಏಕಿ ಗುಂಡು ಆರಿಸೋದು ಅರಣ್ಯ ರಕ್ಷಕರೇ ಭಕ್ಷಕರಾಗಿರೋದು ಎದ್ದು ಕಾಣುತ್ತದೆ ಎಂದು ಹೇಳಿದರು.

ಕೂಡಲೇ ಸರ್ಕಾರ ಸೂಕ್ತ ತನಿಖೆ ನಡೆಸಿ ಮುಂದೆ ಅರಣ್ಯದಂಚಿನ ಗ್ರಾಮಗಳ ಜನರಿಗೆ ರಕ್ಷಣೆ ನೀಡುವಂತೆ ಒತ್ತಾಯಿಸುತ್ತೇವೆಂದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಸಾಯಿ ಚಾಮರಾಜು ಮಂಡಕಳ್ಳಿ, ಬೋಗಾದಿ ಸಿದ್ದೇಗೌಡ, ಎಲ್ ಐಸಿ ಸಿದ್ದಪ್ಪ, ಗುರುಬಸಪ್ಪ, ರಮೇಶ್, ಪ್ಯಾಲೇಸ್ ಬಾಬು, ಬೀಡಾ ಬಾಬು, ಗೋವಿಂದ ರಾಜು, ಹನಕೆರೆ ಸ್ವಾಮಿ, ಕಾವೇರಮ್ಮ, ಗೈಡ್ ಸ್ವಾಮಿ, ಮುದುವನ ಚಂದ್ರು, ಕರ್ನಾಟಕ ವಿರಾಟ ಕೇಸರಿ ಪಡೆ ಶಿವನಂಜಪ್ಪ, ಮಾದಪ್ಪ ಹಾಜರಿದ್ದರು.

# 2ನೇ ದಿನಕ್ಕೆ ಬಿಜೆಪಿ ಧರಣಿ

**ರಾಜೀನಾಮೆಗೆ ಪಟ್ಟು | ರಾಜೀನಾಮೆ ಕೊಡದಿದ್ದರೆ, ಸಂಪುಟದಿಂದ ವಜಾಗೊಳಿಸಿ: ಒತ್ತಾಯ | ಪ್ರತಿಭಟನೆ ತೀವ್ರಗೊಳಿಸುವ ಎಚ್ಚರಿಕೆ**



ರಾಮನಗರ: ಮಹರ್ಷಿ ವಾಲ್ಮೀಕಿ ನಿಗಮದ ಹಣ ದುರುಪಯೋಗದ ಆರೋಪ ಹೊತ್ತಿರುವ ಬಿ. ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ಕೈ ಬಿಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ವತಿಯಿಂದ ನಡೆಯುತ್ತಿರುವ ಪ್ರತಿಭಟನಾ ಧರಣಿ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಜಿಲ್ಲಾ ಸರ್ಕಾರಿ ಕಚೇರಿಗಳ ಸಂಕೀರ್ಣದ ಬಳಿ ಪ್ರತಿಭಟನಾ ಸ್ಥಳದಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದು, ಮಂಗಳವಾರ ಎರಡನೇ ದಿನದಂದು ಸಹ ಮುಂದುವರೆಯಿತು. ಧರಣಿ ಕುಳಿತಿದ್ದ ಪ್ರತಿಭಟನಾಕಾರರು, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ, ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಬಿ. ನಾಗೇಂದ್ರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

**ಪ್ರತಿಭಟನೆ ತೀವ್ರ - ಪ್ರಕಾಶ್ ಎಚ್ಚರಿಕೆ**

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಬಸವನಪುರ ಮಾತನಾಡಿ ಸಚಿವ ನಾಗೇಂದ್ರ 187 ಕೋಟಿ ಹಗರಣದಲ್ಲಿ ಜೈಲಿಗೆ ಹೋಗಿ ಬಂದಿದ್ದಾರೆ. ಅವರನ್ನು ಮತ್ತೆ ಮಂತ್ರಿ ಮಾಡಿದ್ದಾರೆ. ಇದು ಕಾಂಗ್ರೆಸ್ ಭಂಡ ಸರ್ಕಾರ ಎನ್ನುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಭ್ರಷ್ಟಾಚಾರದ ಗಂಭೀರ ಆರೋಪ ಹೊತ್ತಿರುವ ಅವರನ್ನು ತಕ್ಷಣವೇ ಸಂಪುಟದಿಂದ ವಜಾಗೊಳಿಸಬೇಕು. ಒಂದೊಮ್ಮೆ ನಾಗೇಂದ್ರ ಅವರಿಂದ ರಾಜೀನಾಮೆ ಪಡೆಯದಿದ್ದಲ್ಲಿ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಪ್ರತಿಭಟನೆ ಹಮ್ಮಿಕೊಂಡು ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಪರಿಷತ್ ಸದಸ್ಯ ಆರ್.ವಿ.ಸುರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ರಾಮನಗರ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಎಸ್.ಆರ್.ನಾಗರಾಜ್, ಮುರುಳಿ, ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಕಾಳಯ್ಯ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಚನ್ನಪ್ಪ, ಚನ್ನಪಟ್ಟಣ ಮಂಡಳ ಅಧ್ಯಕ್ಷ ಚೇತನ್, ರಾಮನಗರ ನಗರ ಘಟಕದ ಅಧ್ಯಕ್ಷ ಚಂದನ್ ಮೋರೆ, ಮಾಧ್ಯಮ ಪ್ರಮುಖ್ ಸಿದ್ದರಾಜು, ನಗರಸಭೆ ಮಾಜಿ ಸದಸ್ಯ ನಾಗೇಶ್ ಮುಖಂಡರಾದ ಪದ್ಮನಾಭ್, ವಿಶಾಲ್ ಜೈನ್, ಶಿವಮುತ್ತು, ರವಿಕುಮಾರ್, ಪಾರ್ಥ, ಶೇಖರ್, ಕಿಶನ್, ರಂಜನ್, ಲಕ್ಷ್ಮೀ, ನಾಗಮ್ಮ, ಮಮತಾ, ಹೇಮಾ, ಅಶ್ವಥ್, ಟೆಂಪೋ ಶಿವಣ್ಣ, ನಿಂಗರಾಜು, ನಾರಾಯಣ್, ವೀರಭದ್ರಯ್ಯ ಸೇರಿದಂತೆ ಹಲವರಿದ್ದರು.

### ನಾಗೇಂದ್ರ ಸಚಿವ ಸ್ಥಾನಕ್ಕೆ ಅನರ್ಹ

**ಆನಂದ ಸ್ವಾಮಿ**

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಆನಂದ್ ಸ್ವಾಮಿ ಮಾತನಾಡಿ ಪರಿಶಿಷ್ಟ ಪಂಗಡದ ಜನರ ಅನುಕೂಲ ಮತ್ತು ಅಭ್ಯುದಯಕ್ಕೆ ಮೀಸಲಿಟ್ಟ ಹಣವನ್ನು ಕಾಂಗ್ರೆಸ್ ಸರ್ಕಾರ ಹೇಗೆಲ್ಲ ದುರ್ಬಳಕೆ ಮಾಡಿಕೊಂಡಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ತುಳಿತಕ್ಕೊಳಗಾದ ಜನರ ಅಭಿವೃದ್ಧಿಗೆ ಇಟ್ಟಿದ್ದ ಹಣವನ್ನು ಲೂಟಿ ಹೊಡೆದ ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ಅನರ್ಹ. ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ ಇಲ್ಲವಾದಲ್ಲಿ ಅವರನ್ನು ಸಂಪುಟದಿಂದ ಸಿಎಂ ಡಿಕೆಶಿ ಸಮರ್ಥಿಸಿಕೊಳ್ಳುವುದನ್ನು ಬಿಟ್ಟು, ನೈತಿಕ ಹೊಣೆ ಹೊತ್ತು ಅವರಿಂದ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು.

## ಚಿನ್ನತಂಬಿ ವಿರುದ್ಧ ಮತ್ತೆ ನಾಲ್ಕು ಪ್ರಕರಣ ದಾಖಲು

ಮೈಸೂರು: ಸುಮಾರು 400 ಕ್ಕೂ ಹೆಚ್ಚು ಮಂದಿಗೆ 700ಕೆ.ಜಿ ಚಿನ್ನ ವಂಚಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿನ್ನತಂಬಿ ವಿರುದ್ಧ ಇನ್ನೂ ನಾಲ್ಕು ಪ್ರಕರಣ ದಾಖಲಾಗಿವೆ.

ನಜರ್ ಬಾದ್ ಹಾಗೂ ಕುವೆಂಪುನಗರ ಠಾಣೆಯಲ್ಲಿ ತಲಾ ಎರಡು ಪ್ರಕರಣಗಳು ದಾಖಲಾಗಿವೆ. ಮಹಿಳೆಯ ಖಾಸಗಿ ಅಂಗ ಮುಟ್ಟಿ ಅಸಭ್ಯ ವರ್ತನೆ ಹಾಗೂ ಗೂಂಡಾಗಳಿಂದ ಕೂಡಿ ಹಾಕಿ ಹಲ್ಲೆ ಮಾಡಿರುವ ಆರೋಪ ಚಿನ್ನತಂಬಿ ವಿರುದ್ಧ ಕೇಳಿ ಬಂದಿದೆ. ಹಾಸನದ ಅರಕಲಗೂಡು ಮೂಲದ ಮಹಿಳೆ, ಹೊಳೆ ನರಸೀಪುರ ತಾಲೂಕಿನ ಮಹಿಳೆ ಸೇರಿ ಮೈಸೂರಿನ ಇಬ್ಬರಿಗೆ ವಂಚನೆ ಮಾಡಿದ್ದಾನೆ ಎನ್ನಲಾಗಿದೆ. ಚಿನ್ನ ಅಡವಿಡಲು ಬಂದವರ ಬಳಿ ಅಸಭ್ಯವಾಗಿ ವರ್ತಿಸಿ ದೈಹಿಕ, ಮಾನಸಿಕ ಹಿಂಸೆ ನೀಡಿ ಕಿರುಕುಳ ಹಾಗೂ ಚಿನ್ನ ಕಸಿದುಕೊಂಡು ಹಣ ನೀಡದೆ ವಂಚನೆ ಮಾಡಿದ್ದಲ್ಲದೇ ರೌಡಿಗಳನ್ನ ಕರೆಸಿ ಹಲ್ಲೆ ನಡೆಸಿರುವ ಆರೋಪವೂ ಕೇಳಿ ಬಂದಿದೆ. ಮಹಿಳೆಯರ ಜೊತೆ ತೆರಳಿದ್ದ ಮಹಿಳೆಯ ಗಂಡ ಹಾಗೂ ಅಣ್ಣಂದಿರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ. ಪ್ರಕರಣ ಕುರಿತು ಚಿನ್ನ ಕಳೆದುಕೊಂಡವರು ನಿತ್ಯ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.





ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ


# ಸಾರ್ವಜನಿಕರ ಕೆಲಸದ ವಿಳಂಬ ಖಂಡಿಸಿ ಪ್ರತಿಭಟನೆ




ಎಚ್.ಡಿ.ಕೋಟೆ: ತಾಲೂಕು ಆಡಳಿತದ ಭ್ರಷ್ಟಾಚಾರ ಹಾಗೂ ವಿಳಂಬ ನೀತಿ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಸಹಯೋಗದಲ್ಲಿ ಪ್ರತಿಭಟನೆ ನಡೆಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಗದ್ದಿಗೆ ವೃತ್ತದಿಂದ ಎತ್ತಿನಗಾಡಿ ಮತ್ತು ಟ್ರ್ಯಾಕ್ಟರ್ ನೊಂದಿಗೆ ಮೆರವಣಿಗೆ ಹೊರಟು ಮಿನಿ ವಿಧಾನ ಸೌಧದ ಆವರಣದಲ್ಲಿ ಸಭೆ ನಡೆಸಿ ಹಕ್ಕೋತ್ತಾಯಗಳನ್ನು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಕಳುಹಿಸಿದರು.

ರೈತ ಮುಖಂಡ ಚಾ ನಂಜುಂಡಮೂರ್ತಿ ಮಾತನಾಡಿ, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕುಗಳ ರೈತರು ಮಳೆ ಇಲ್ಲದೇ ಕಂಗಾಲಾಗಿದ್ದಾರೆ. ತಾಲೂಕನ್ನು ಬರಪೀಡಿತ ಎಂದು ಘೋಷಿ, ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ಹಣವನ್ನು ಒಂದು ತಿಂಗಳಲ್ಲಿ ವಿತರಿಸಬೇಕು. ಹಾಗೂ ಕಬಿನಿ ನೀರನ್ನು ತಮಿಳುನಾಡಿಗೆ ಬಿಡು ತ್ತಿದ್ದು, ತಾರಕ ಜಲಾಶಯಕ್ಕೆ ಕೂಡಲೇ 2 ಟಿಎಂಸಿ ನೀರು ಲಿಫ್ಟ್ ಮಾಡಬೇಕು. ತಾರಕ, ಹೆಬ್ಬಳ್ಳ ಜಲಾಶಯಕ್ಕೆ ಕೂಡಲೇ ನೀರು ತುಂಬಿಸಿ ಎಲ್ಲಾ ನಾಲೆಗಳಲ್ಲಿ ನೀರು ಹರಿಸಿ ಕೆರೆ ಕಟ್ಟೆಗಳನ್ನು ಭರ್ತಿ ಮಾಡಿಸಿ ಬತ್ತಿ ಹೋಗಿರುವ ಬೋರ್‌ವೆಲ್ಗಳಿಗೂ ಜೀವ ನೀಡಬೇಕು ಎಂದರು. ತಾಲೂಕಿನಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆ ನಾಶವಾದರೆ, ಜನ, ಜಾನುವಾರುಗಳು ಮೃತ ಪಟ್ಟರೆ ಸುಪ್ರೀಂಕೋರ್ಟ್ ನಿರ್ದೇಶನಂತೆ ಪರಿಹಾರ ಮತ್ತು ಕುಟುಂಬಕ್ಕೆ ಸರ್ಕಾರಿ ನೌಕರಿ ನೀಡಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಲೋಕೇಶ್ ರಾಜ್ ಅರಸು ಮಾತನಾಡಿ, ರೈತರ ಬದುಕು ಇಂದು ಹೇಳಿಕೊಳ್ಳಲಾಗದಷ್ಟು ಅತಂತ್ರವಾಗಿದೆ. ದಿನೇ, ದಿನೇ ರೈತರ ಸಮಸ್ಯೆಗಳು ಹೆಚ್ಚಾಗುತ್ತಿವೆ. ಸ್ವಾತಂತ್ರ್ಯ ಬರುವ ಮೊದಲು ಈ ದೇಶದಲ್ಲಿ ಬರಗಾಲ ಇತ್ತು ಆ ಪರಿಸ್ಥಿತಿಯನ್ನು ಎದುರಿಸಲು ವಿದೇಶದಿಂದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿಕೊಳ್ಳಲಾಗಿತ್ತು ಆದರೆ, ಇವತ್ತು ದೇಶದ ನೂರ ನಲವತ್ತು ಕೋಟಿ ಜನಕ್ಕೂ ಯಾವುದೇ ಆಹಾರ ಕೊರತೆ ಆಗದಂತೆ ರೈತಾಪಿ ವರ್ಗ ದುಡಿಯುತ್ತಿದೆ. ಪ್ರಸ್ತುತ ರಾಜ್ಯಕ್ಕೆ ಬಂದಿರುವ ಬರಗಾಲ ಎದುರಿಸಲು ಸರ್ಕಾರ ಯಾವುದೇ ಕಾರ್ಯಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು. ರೈತರಾದ ವಿಜಯೇಂದ್ರ, ಕೆ.ಸಿ.ಪರಮೇಶ್, ಶಿರಮಳ್ಳಿ ಸಿದ್ದಪ್ಪ, ಸರಗೂರು ನಟರಾಜು, ಮನುಸೋಮಯ್ಯ, ಹೆಜ್ಜಿಗೆ ಪ್ರಕಾಶ್, ಟಿ.ರಾಜು, ಮಹದೇವನಾಯ್ಕ, ನಂದೀಶ್ ಹಿರೇಹಳ್ಳಿ, ಬಿ.ಟಿ.ಉಮೇಶ, ಮೂತ್ರಿ, ಚಂದ್ರು, ಅಂಕನಾಯಕ್, ರಾಜೇಶ್, ಜಗದೀಶ್, ಸುರೇಶ್, ಪಿ.ನಾಗರಾಜು, ಪ್ರಸಾದ್, ಚೌಡನಾಯ್ಕ, ಮಹೇಂದ್ರ, ಸಿ. ವೆಂಕಟಸ್ವಾಮಿ, ರವಿ, ಮುನಿಯಾಂಡಿ, ಬಸವರಾಜು, ಮಂಚನಾಯ್ಕ, ಚೌಡಮ್ಮ, ಚನ್ನನಾಯಕ, ಮಹಾಲಿಂಗು, ರತ್ನಮ್ಮ, ಬಿ.ಕೆ.ಮಹೇಶ್, ಬಸವರಾಜಪ್ಪ ಸೇರಿದಂತೆ ಅನೇಕರಿದ್ದರು.

### ಹಲವು ಬೇಡಿಕೆಗಳನ್ನು ಮುಂದಿಟ್ಟ ಸಂಘಟನೆ

- **ಕಾಡಂಚಿನಲ್ಲಿ ಅಳವಡಿಸಿರುವ ರೈಲ್ವೆ ಕಂಬಿಗಳಿಗೆ ಕಬ್ಬಿಣದ ಜಾಲರಿ ಅಳವಡಿಸಿ ಜಿಂಕೆ, ಹಂದಿ ಇತರೆ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಬೇಕು.**
- **70-80 ವರ್ಷಗಳಿಂದ ಅನುಭವದಲ್ಲಿರುವ ಹಾಗೂ ಭೂ ಮಂಜೂರಾತಿಗಾಗಿ 50, 53, 57 ರಲ್ಲಿ ಅರ್ಜಿ ಹಾಕಿರುವ ರೈತರಿಗೆ ಕೂಡಲೇ ಸಾಗುವಳಿ ಪತ್ರ ನೀಡಬೇಕು.**
- **ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನಿಗದಿತ ಶುಲ್ಕವನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು.**
- **ಐದು ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಕೂಡಲೇ ವರ್ಗಾವಣೆ ಮಾಡಬೇಕು.**
- **ಸರ್ವೆ ಇಲಾಖೆಯಲ್ಲಿ ದುರಸ್ತಿ, ಅನುಬಂಧ, ಪೋಡಿ ಮತ್ತು ಸರ್ವೆ ಕಾರ್ಯ ವಿಳಂಬ ಸರಿಪಡಿಸಬೇಕು.**
- **ತಿರುಗಾಡುವ ಓಣಿಗಳು, ಕೆರೆಗಳು, ಹಳ್ಳ, ಸ್ಮಶಾನ ಜಾಗಗಳನ್ನ ತೆರವುಗೊಳಿಸಬೇಕು.**
- **ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು.**
- **ಆದಿವಾಸಿಗಳಿಗೆ ಗುಣಮಟ್ಟದ ಹಾಗೂ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳನ್ನು ಒದಗಿಸಬೇಕು.**

**ಪ್ರತಿಭಟನೆ ನೇತೃತ್ವವನ್ನು ಮಹದೇವನಾಯ್ಕ, ನಂದೀಶ್, ಉಮೇಶ್, ಪ್ರಸಾದ್ ಮತ್ತು ಮುಂತಾದವರು ವಹಿಸಿದ್ದರು.**


**ಕಾಶಿ ಯಾತ್ರೆ ತೆರಳಿದ್ದ ಕುಟುಂಬದ ಮನೆಗೆ ಕನ್ನ; ಕುಖ್ಯಾತ ಮನೆಗಳ್ಳನ ಬಂಧನ**

# 3.50 ಲಕ್ಷ ರೂ.ಮೌಲ್ಯದ 32 ಗ್ರಾಂ ಚಿನ್ನಾಭರಣ ವಶ

ಗುಂಡ್ಲುಪೇಟೆ: ಕಾಶಿ ಯಾತ್ರೆಗೆ ತೆರಳಿದ್ದ ಕುಟುಂಬದ ಮನೆಯ ಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಿದ್ದ ಕುಖ್ಯಾತ ಮನೆಗಳ್ಳನನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂಧಿಸಿ, ಕಳುವಾಗಿದ್ದ ?3.50 ಲಕ್ಷ ಮೌಲ್ಯದ 32 ಗ್ರಾಂ ಚಿನ್ನಾಭರಣವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿದ್ದಾರೆ.

ಬಂಧಿತನನ್ನು ಪಟ್ಟಣದ 15ನೇ ವಾರ್ಡ್‌ನ ಚಿಕ್ಕಮಾಂಸದ ಅಂಗಡಿ ಬೀದಿ ನಿವಾಸಿ, ಕೂಲಿ ಕಾರ್ಮಿಕ ಈಶ್ವರ ಅಲಿಯಾಸ್ ಈಶ ಅಲಿಯಾಸ್ ಶಿವ ಎಂದು ಗುರುತಿಸಲಾಗಿದೆ.

ಪಟ್ಟಣದ ನಿವಾಸಿ ಚಂದನ ಅವರ ಕುಟುಂಬಸ್ಥರು ಜುಲೈ 6ರಂದು ಕಾಶಿ ಯಾತ್ರೆಗೆ ತೆರಳಿದ್ದರು. ಜುಲೈ 14ರಂದು ಮನೆಗೆ ಹಿಂದಿರುಗಿದಾಗ ಮನೆಯ ಮುಂಭಾಗದ ಬಾಗಿಲು ಮುರಿದಿರುವುದು ಕಂಡುಬಂದಿದೆ. ಒಳಗೆ ಪರಿಶೀಲಿಸಿದಾಗ ಬೀರುವಿನಲ್ಲಿದ್ದ 15.200 ಗ್ರಾಂ ತೂಕದ ಚಿನ್ನದ ಚೈನ್,



ಜುಮುಕಿ, ಫ್ಯಾನ್ಸಿ ಓಲೆ, ಡ್ರಾಪ್ಸ್ ಸೇರಿದಂತೆ ಒಟ್ಟು 32 ಗ್ರಾಂ ಚಿನ್ನಾಭರಣ ಕಳುವಾಗಿರುವುದು ಬೆಳಕಿಗೆ ಬಂದಿತ್ತು. ಈ ಕುರಿತು ಚಂದನ ಅವರು ನೀಡಿದ ದೂರಿನ ಮೇರೆಗೆ ಗುಂಡ್ಲುಪೇಟೆ ಠಾಣೆಯಲ್ಲಿ ಮೊ.ನಂ. 227/2026ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.



**ತನಿಖಾ ತಂಡಕ್ಕೆ ಎಸ್ಪಿ ಮೆಚ್ಚುಗೆ**

ಮನೆಗಳ್ಳತನ ಪ್ರಕರಣವನ್ನು ಕ್ಷಿಪ್ರವಾಗಿ ಭೇದಿಸಿ ಆರೋಪಿಯನ್ನು ಕಳುವಾದ ಮಾಲು ಸಮೇತ ಬಂಧಿಸುವಲ್ಲಿ ಯಶಸ್ವಿಯಾದ ತನಿಖಾ ತಂಡದ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಮುತ್ತುರಾಜ್ ಎಂ. ಅವರು ವಿಶೇಷವಾಗಿ ಪ್ರಶಂಸಿಸಿದ್ದಾರೆ.

### ನಿರಂತರ ತನಿಖೆ, ಆರೋಪಿಯ ಬಂಧನ

ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕ ಮುತ್ತುರಾಜ್ ಎಂ. ಐಪಿಎಸ್ ಹಾಗೂ ಹೆಚ್ಚುವರಿ ಎಸ್ಪಿ ಎಂ.ಎನ್. ಶಶಿಧರ್ ಅವರ ಮಾರ್ಗದರ್ಶನದಲ್ಲಿ, ಚಾಮರಾಜನಗರ ಡಿವೈಎಸ್ಪಿ ಸ್ನೇಹರಾಜ್ ಎನ್. ಅವರ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಗುಂಡ್ಲುಪೇಟೆ ಇನ್ಸ್‌ಪೆಕ್ಟರ್ ಎನ್. ಜಯಕುಮಾರ್, ಪಿಎಸ್‌ಐ ನರೇಶ್ ಕುಮಾರ್ ಹಾಗೂ ಸಿಬ್ಬಂದಿಗಳಾದ ಶಿವಕುಮಾರ್, ಸುಕೇಶ್, ಸುನಿಲ್, ನಾಗಮ್ಮ ಮತ್ತು ಜಿಲ್ಲಾ ಸಿಡಿಆರ್ ವಿಭಾಗದ ವೆಂಕಟೇಶ್, ಶಂಕರ್‌ರಾಜ್ ಅವರನ್ನು ಒಳಗೊಂಡ ತಂಡವು ನಿರಂತರ ತನಿಖೆ ನಡೆಸಿ ಆಗಸ್ಟ್ 17ರಂದು ಆರೋಪಿ ಈಶ್ವರನನ್ನು ವಶಕ್ಕೆ ಪಡೆದುಕೊಂಡಿದೆ. ಆರೋಪಿಯಿಂದ ಕಳುವಾಗಿದ್ದ ಸಂಪೂರ್ಣ 32 ಗ್ರಾಂ ಚಿನ್ನಾಭರಣಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

## ನಿವೃತ್ತ ಯೋಧ ಶತಾಯುಷಿಗೆ ಸನ್ಮಾನ



**ಮೈಸೂರು:** ಭಾರತದ ನೌಕಾಪಡೆಯಲ್ಲಿ ಕಾರ್ಯನಿರ್ವಹಿಸಿ ನಿರ್ವೃತರಾದ ಶತಾಯುಷಿ ಆರ್.ಈ ಕೃಷ್ಣಮೂರ್ತಿ ಅವರನ್ನು 80ನೇ ಸ್ವಾತಂತ್ರ್ಯ ದಿನಾಚರಣೆಯಂದು ಸನ್ಮಾನಿಸಲಾಯಿತು.

ಮೈಸೂರಿನ ನಗರ ಬಿಜೆಪಿ ವಕ್ತಾರ ಮೋಹನ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭಾರತ್, ಹಿರಿಯರಾದ ರಾಜೇಂದ್ರಣ್ಣ, ಸುದರ್ಶನ್, ವಿಶ್ವೇಶ್ವರ ಭಟ್, ರಾಮು, ಟಿ. ಎಸ್.ಅರುಣ್, ಜ್ಯೋತಿ, ಚರಣ್, ಸತೀಶ್, ಜಗದೀಶ್, ಇನ್ನಿತರರು ಇದ್ದರು.

# ಪ.ಪಂ. ಅಮಾನತು ಅಧಿಕಾರಿಗಳು ರಕ್ಷಣೆಗೆ ಆಗ್ರಹ




ಮೈಸೂರು: ತಪ್ಪು ಮಾಡದೆ ಅಮಾನತುಗೊಂಡಿರುವ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಅಮಾಯಕ ನಾಲ್ವರು ಅಧಿಕಾರಿಗಳನ್ನು ರಕ್ಷಿಸುವಂತೆ ಆಗ್ರಹಿಸಿ ಹಾಗೂ ಇದರ ಹಿಂದಿನ ಸೂತ್ರಧಾರಿ ಕಂದಾಯ ನಿರೀಕ್ಷಕ ಮಂಜುನಾಥ್‌ರನ್ನು ಕೂಡಲೆ ಬಂಧಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಸಮಾಜ ರಕ್ಷಣಾ ಸೇನೆ, ನೇತೃತ್ವದಲ್ಲಿ ರಮ್ಮನಹಳ್ಳಿ ಗ್ರಾಮಸ್ಥರು ಮೈಸೂರು ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ರಮ್ಮನಹಳ್ಳಿ ಪಟ್ಟಣ ಪಚಾಯಿತಿ ವ್ಯಾಪ್ತಿಯ ಹಂಚ್ಯಾ ಗ್ರಾಮ ಸರ್ವೆ ನಂ.292ರ ಸರ್ಕಾರಿ ಖರಾಬು ಜಮೀನಿಗೆ ಸಂಬಂಧಿಸಿದಂತೆ ದುರುದ್ದೇಶಪೂರಿತವಾಗಿ ರಮ್ಮನಹಳ್ಳಿ ಪಂಚಾಯಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಏಕಾಏಕಿ ಅಮಾನತು ಕ್ರಮ ಕೈಗೊಳ್ಳಲಾಗಿದೆ. ಆದರೆ ಅಮಾನಿತಿನಲ್ಲಿ ಪ್ರಸ್ತಾಪಿಸಲಾಗಿರುವ ಪಿಐಡಿ ನಂಬರಿನ ನಿವೇಶನಕ್ಕೂ, ಸಂಬಂಧಪಟ್ಟ ಭೌತಿಕ ಸರ್ಕಾರಿ ಜಾಗಕ್ಕೂ ಯಾವುದೇ ಸಂಬಂಧವಿಲ್ಲ. ಹೀಗಿದ್ದರೂ ಅಧಿಕಾರಿಗಳನ್ನು ಅಮಾನತುಗೊಳಿಸಿರುವುದು ದೋಷಪೂರಿತ ನಿರ್ಧಾರವಾಗಿದೆ. 1992-93ರ ಅವಧಿಯಲ್ಲಿ ಶ್ರೀ ಜಯಚಾಮರಾಜೇಂದ್ರ ಗೃಹ ನಿರ್ಮಾಣ ಸಹಕಾರ ಸಂಘವು ಸದರಿ ಸರ್ಕಾರಿ ಖರಾಬು ಜಾಗದ ಪಕ್ಕದಲ್ಲಿ ಬಡಾವಣೆಯನ್ನು ನಿರ್ಮಿಸಿ ನಿವೇಶನಗಳನ್ನು ರಚಿಸಿದ್ದು. ಇದಕ್ಕೆ ಹಂಚ್ಯಾ ಗ್ರಾಮ ಪಂಚಾಯಿತಿಯಲ್ಲಿ ಡಿಮ್ಯಾಂಡ್ ರಿಜಿಸ್ಟರ್ ಹಾಗೂ ಖಾತೆ ಪ್ರಕ್ರಿಯೆ ನಡೆದಿದೆಯೆ ಹೊರತು, ಅಮಾನತು ಗೊಂಡಿರುವ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಅಧಿಕಾರಿಗಳಾದ ರವಿಕೀರ್ತಿ, ಪುಷ್ಪವತಿ, ರಾಮಸ್ವಾಮಿ ಹಾಗೂ ಸಿದ್ದಯ್ಯ ಯಾವುದೇ ಈ-ಖಾತೆಯನ್ನು ಸೃಜಿಸಿಲ್ಲ. ಇವರ ಮೇಲಿನ ವೃತ್ತಿ ವೈಷಮ್ಯದಿಂದ ಕಂದಾಯ ನಿರೀಕ್ಷಕ ಮಂಜುನಾಥ್ ತನ್ನ ಪ್ರಭಾವ ಭೀರಿ ಸುಳ್ಳು ವರದಿಯನ್ನು ಸೃಷ್ಟಿಸಿ ಅಮಾಯಕರ ಅಮಾನತಿಗೆ ಕಾರಣರಾಗಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಅಕ್ರಮ ನಡೆದಿದ್ದರೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿ. ಆದರೆ ತನಿಖೆ ನಡೆಸದೇ ಅಧಿಕಾರಿಗಳನ್ನು ಏಕಾಏಕಿ ಅಮಾನತು ಮಾಡಿರುವುದು ಸರಿಯಲ್ಲ. ಅಮಾನತು ಆದೇಶವನ್ನು ಕೂಡಲೇ ವಾಪಸ್ ಪಡೆದು, ಪ್ರಕರಣದ ಕುರಿತು ನ್ಯಾಯಯುತ ತನಿಖೆ ನಡೆಸಬೇಕು" ಎಂದು ಸಂಘಟನೆಗಳ ಮುಖಂಡರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಲವತ್ತ ರಾಮಚಂದ್ರ, ಸಮಾಜ ರಕ್ಷಣಾ ಸೇನೆಯ ರಾಜ್ಯಾಧ್ಯಕ್ಷ ಹನುಮಂತರಾಜು, ಉಪಾಧ್ಯಕ್ ಶರತ್ ಕುಮಾರ್, ರಮ್ಮನಹಳ್ಳಿ ಗ್ರಾಮದ ಮುಖಂಡರಾದ ನಾಗರಾಜು, ರಮೇಶ್, ಸುರೇಶ್, ಚೆಲುವಯ್ಯ, ಗೋವಿಂದ, ಸಿದ್ದು, ಚೆನ್ನಯ್ಯ ಇನ್ನಿತರರು ಪಾಲ್ಗೊಂಡಿದ್ದರು.

# ಪೌರಾಣಿಕ ನಾಟಕ: ಸಮಾಜಕ್ಕೆ ಸಂದೇಶ



ಚಾಮರಾಜನಗರ. ಪೌರಾಣಿಕ ನಾಟಕಗಳು ನಮ್ಮ ಬದುಕಿಗೆ ಪೂರಕವಾದ ಸತ್ಯ, ನ್ಯಾಯ ನೀತಿ,?ಧರ್ಮದ ಸಂದೇಶವನ್ನು ಬೋಧಿಸುತ್ತವೆ. ಅವು ನೆಮ್ಮದಿಯ ಬದುಕಿಗೆ ದಾರಿದೀಪಗಳಿದ್ದಂತೆ ಎಂದು ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಹೇಳಿದರು.

ಜಿಲ್ಲೆಯ ಶ್ರೀಮಲೆಮಹದೇಶ್ವರ ಬೆಟ್ಟದ ದೇವಸ್ಥಾನದ ಮುಂಭಾಗದಲ್ಲಿರುವ ರಂಗಕಲಾಮಂದಿರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕಲಾ ಸಂಘ, ರೋಟರಿ ಸಂಸ್ಥೆ ಸಹಯೋಗದಲ್ಲಿ ಭೀಮನ ಅಮಾವಾಸ್ಯೆ ಪ್ರಯುಕ್ತ ನಡೆದ ದಕ್ಷಯಜ್ಞ ಅಥವಾ ಬೃಗುಮುನಿಯ ಗರ್ವಭಂಗ ಪೌರಣಿಕ ನಾಟಕವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯು ಕಲೆಗಳ ತವರೂರಾಗಿದ್ದು, ಎಲ್ಲ ರೀತಿಯ ಕಲಾವಿದರು ಇದ್ದಾರೆ. ರಂಗಭೂಮಿ ಕಲಾವಿದರಿಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹೆಚ್ಚಿನ ಪ್ರೋತ್ಸಾಹ ನೀಡಿ, ನೀತಿಯ ಪಾಠವನ್ನು ಸಾರುತ್ತಿರುವ ರಂಗಕಲೆ ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಮಾಜಿ ಅಧ್ಯಕ್ಷ ಕಮಲ್ರಾಜ್, ಹಾರ್ಮೋನಿಯಂ ಮಾಸ್ಟರ್ ಆರ್.ಶಿವಣ್ಣ. ಕಲಾವಿದ ಆರ್ .ರಾಜಪ್ಪ, ರಮೇಶ್, ಮಂಗಲ ಆರ್.ನಾಗರಾಜು, ಮಲ್ಲಯ್ಯನಪುರ ಸಂಪತ್‌ಕುಮಾರ್, ಗೋವಿಂದರಾಜು, ಆರ್.ಮಲ್ಲಿಕಾರ್ಜುನಸ್ವಾಮಿ, ಎಸ್.ನಂದೀಶ್, ಶ್ರೀಕಂಠಸ್ವಾಮಿ, ಮಹೇಶ್, ರೇವಣ್ಣ, ಉಮೇಶ್, ಸಾಗರ್, ಸುರೇಶ್, ಜಯರಾಜು, ಆರ್. ಮೂರ್ತಿ, ಎಂ.ಎನ್.ಮಹದೇವ, ನಿಂಗಯ್ಯ, ರಾಚಯ್ಯ ಇತರರು ಹಾಜರಿದ್ದರು.

### ಬಿಡದಿ ಸಮಗ್ರ ನಗರ ಯೋಜನೆ

## ಉಳಿದ ಎರಡು ಗ್ರಾಮಗಳಲ್ಲಿ ಭೂಸ್ವಾಧೀನಕ್ಕೆ ಅಧಿಸೂಚನೆಗೆ ಆಗ್ರಹಿಸಿ ಪ್ರತಿಭಟನೆ

**ಒಂಬತ್ತು ಗ್ರಾಮಗಳ ಪೈಕಿ ಏಳು ಗ್ರಾಮಗಳಲ್ಲಿ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ**

**ಇನ್ನೆರಡು ಗ್ರಾಮಗಳಿಗೇಕೆ ವಿಳಂಬ: ಪ್ರತಿಭಟನಾಕಾರರ ಪ್ರಶ್ನೆ**



ರಾಮನಗರ: ಬಿಡದಿ ಹೋಬಳಿಯಲ್ಲಿ ಉದ್ದೇಶಿತ ಸಮಗ್ರ ನಗರ ಯೋಜನೆಗೆ ಭೂಸ್ವಾಧೀನ ವಿಚಾರದಲ್ಲಿ ಸರ್ಕಾರ ಈಗಾಗಲೆ 9 ಗ್ರಾಮಗಳ ಪೈಕಿ 7 ಗ್ರಾಮಗಳಲ್ಲಿನ ಭೂಸ್ವಾಧೀನಕ್ಕೆ ಅಂತಿಮ ಅಧಿಸೂ ಚನೆ ಹೊರಡಿಸಿದೆ. ಉಳಿದ ಎರಡು ಬೈರಮಂಗಲ ಮತ್ತು ಕಂಚುಗಾ ರನಹಳ್ಳಿ ಗ್ರಾಮಗಳ ಭೂಸ್ವಾಧೀನಕ್ಕೂ ಅಧಿಸೂಚನೆ ಹೊರೆಡಿಸಬೇಕು ಎಂದು ಒತ್ತಾಯಿಸಿ ಆ ಭಾಗದ ರೈತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕಂದಾಯ ಭವನದ ಜಿಬಿಡಿಎ ಕಚೇರಿಯ ಮುಂಭಾಗ ರೈತರು ಧರಣಿ ಕುಳಿತು, ಅಧಿಸೂಚನೆ ಹೊರಡಿಸುವಂತೆ ಒತ್ತಾಯಿಸಿದರು. ಬಿಡದಿ ಸಮಗ್ರ ಉಪನಗರ ಯೋಜನೆ ಸಂಬಂಧ ಒಟ್ಟು 9 ಕಂದಾಯ ಗ್ರಾಮಗಳ ಪೈಕಿ 7 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಉಳಿದಿರುವ 2 ಗ್ರಾಮಗಳ ಅಧಿಸೂಚನೆ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಇದರಿಂದಾಗಿ ಸ್ಥಳೀಯ ರೈತರು ಹಾಗೂ ಜಮೀನು ಮಾಲೀಕರು ತೀವ್ರ ಆತಂಕ ಮತ್ತು ಅನಿಶ್ಚಿತತೆಯಲ್ಲಿ ಕಾಲ ಕಳೆಯುವಂತಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಭೂ ಮಾಲೀಕರಾದ ಕೃಷ್ಣಮೂರ್ತಿ, ಅಂಚಿಪುರ ಶೇಖರ್, ಭರತ್ , ರಾಧಾಕೃಷ್ಣ, ಗೌತಮ್, ತಾಯಪ್ಪನದೊಡ್ಡಿ ಸ್ವಾಮಿ, ಚೇತನ್, ರಾಮಾಂಜನಿ, ಶಿವಕುಮಾರ್, ನಾಗೇಶ್ ಮತ್ತಿತರರು ಭಾಗವಹಿಸಿದ್ದರು. ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ಅವರಿಗೆ ಮನವಿ ಸಲ್ಲಿಸಿ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

### ಸರ್ಕಾರದ ವಿಳಂಬ ನೀತಿ ಸರಿಯಲ್ಲ: ಹೊಸೂರು ರಾಜಣ್ಣ

**ತಾಪಂ ಮಾಜಿ ಸದಸ್ಯ ಹೊಸೂರು ರಾಜಣ್ಣ ಮಾತನಾಡಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಸರ್ಕಾರದ ವಿಳಂಬ ನೀತಿಯಿಂದಾಗಿ ಭೂಮಿಗೆ ಸಂಬಂಧಿಸಿದ ಪ್ರಕ್ರಿಯೆಗಳು ಸ್ಥಗಿತಗೊಂಡಿವೆ ಎಂದು ದೂರಿದರು. ಬಾಕಿ ಉಳಿದಿರುವ ಎರಡು ಗ್ರಾಮಗಳಿಗೆ ಸಂಬಂಧಿಸಿದ ಅಧಿಸೂಚನೆಯನ್ನು ಯಾವುದೇ ವಿಳಂಬವಿಲ್ಲದೆ ಅಧಿಕೃತವಾಗಿ ಪ್ರಕಟಿಸಬೇಕು. ಒಂದು ವೇಳೆ ನಮ್ಮ ಬೇಡಿಕೆಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.**

### ವಿಳಂಬದಿಂದ ರೈತರಿಗೆ ನಷ್ಟ – ಸಿದ್ದರಾಜು

**ರೈತ ಹೊಸೂರು ಸಿದ್ದರಾಜು ಮಾತನಾಡಿ ಭೈರಮಂಗಲ ಹಾಗೂ ಕಂಚುಗಾರನಹಳ್ಳಿ ಎರಡು ಗ್ರಾಮಗಳಿಗೂ ಅಂತಿಮ ಅಧಿಸೂಚನೆ ಮಾಡಬೇಕು. ಈ ಬಗ್ಗೆ ಸಿಎಂ ಹಾಗೂ ಸಚಿವರಿಗೆ ಮನವಿ ಮಾಡಿದ್ದೇವೆ. ಅಂತಿಮ ಅಧಿಸೂಚನೆ ವಿಳಂಬವಾದರೆ ಆ ಭಾಗದ ರೈತರಿಗೆ ನಷ್ಟ ಆಗಲಿದೆ. ಕೂಡಲೇ ಸರ್ಕಾರ ಯೋಜನೆ ಮುಗಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಅಧಿಸೂಚನೆ ಹೊರಡಿಸದೆ ವಿಳಂಭ ಮಾಡಿದರೆ ಪರಿಹಾರ ದರವನ್ನು ಹೆಚ್ಚಳ ಮಾಡಿ ಎಂದು ಒತ್ತಾಯಿಸಿದರು.**

# ಸಚಿವ ಬಿ.ನಾಗೇಂದ್ರ ವಜಾಕ್ಕೆ ಆಗ್ರಹ

## ಚಾಮರಾಜನಗರದಲ್ಲಿ ಸರ್ಕಾರದ ವಿರುದ್ಧ ಭಾರಿ ಆಕ್ರೋಶ । ಬಿಜೆಪಿ ಧರಣಿ



ಚಾಮರಾಜನಗರ: ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಭ್ರಷ್ಟಾಚಾರ ಪ್ರಕರಣದಲ್ಲಿ ಆರೋಪಿಯಾಗಿರುವ ಸಚಿವ ಬಿ. ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ತಕ್ಷಣವೇ ವಜಾಗೊಳಿಸುವಂತೆ ಒತ್ತಾಯಿಸಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ನಗರದಲ್ಲಿ ಭಾರಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್ಕುಮಾರ್ ಅವರ ನೇತೃತ್ವದಲ್ಲಿ ಜಮಾಯಿಸಿದ ನೂರಾರು ಪ್ರತಿಭಟನಾಕಾರರು, ರಾಜ್ಯ ಸರ್ಕಾರ ಹಾಗೂ ಸಚಿವ ಬಿ. ನಾಗೇಂದ್ರ ಅವರ ವಿರುದ್ಧ ಉಗ್ರ ಘೋಷಣೆಗಳನ್ನು ಕೂಗಿ ತಮ್ಮ ತೀವ್ರ ಆಕ್ರೋಶವನ್ನು ಹೊರಹಾಕಿದರು.

ಈ ಬೃಹತ್ ಪ್ರತಿಭಟನೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಪರಿಶಿಷ್ಟ ಪಂಗಡಗಳ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಜಯಸುಂದರ್, ಹಿಂದುಳಿದ ವರ್ಗಗಳ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಆರ್. ಸುಂದರ್, ಬಾಲಸುಬ್ರಹ್ಮಣ್ಯಂ, ಮುಖಂಡರಾದ ಮಲ್ಲೇಶ್, ಸಿ.ಎನ್. ಬಾಲರಾಜು, ಮೂಡಹಳ್ಳಿ ಮೂರ್ತಿ, ಚಂದ್ರಶೇಖರ್, ಡಾ. ನವೀನ್ ಮೌರ್ಯ, ಸೂರ್ಯಕುಮಾರ್, ರಾಮಸಮುದ್ರ ಶಿವಣ್ಣ, ಆನಂದ್ ಭಗೀರಥ, ಸಾಗಡೆ ಗುರುಪ್ರಸಾದ್, ನಟರಾಜು, ಚಂದ್ರು, ಶಿವರಾಜ್, ಕಾಡಹಳ್ಳಿ ಕುಮಾರ್, ಕೂಸಣ್ಣ, ಭಾಸ್ಕರ್, ಕಿರಣ್, ಕೃಷ್ಣ, ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಮಲೆಯೂರು ಕಮಲಮ್ಮ ಹಾಗೂ ಕುಮಚಹಳ್ಳಿ ಪಾರ್ವತಿ ಸೇರಿದಂತೆ ಹಲವು ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

### ವಾಲ್ಮೀಕಿ ನಿಗಮದ ಹಣ ಲೂಟಿ ಆರೋಪ ಹಾಗೂ ಉಗ್ರ ಹೋರಾಟದ ಎಚ್ಚರಿಕೆ

**ಧರಣಿಯ ನೇತೃತ್ವ ವಹಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಸಿ. ಎಸ್. ನಿರಂಜನ್ಕುಮಾರ್, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಬರೋಬ್ಬರಿ 187 ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆಸಿರುವ ಗಂಭೀರ ಆರೋಪ ಹೊತ್ತಿರುವ ವ್ಯಕ್ತಿಗೆ ಸಚಿವ ಸ್ಥಾನ ನೀಡಿರುವುದು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಚಾರ ಎಂದರು. ಶೋಷಿತ ವಾಲ್ಮೀಕಿ ಸಮುದಾಯದ ಏಳಿಗೆಗಾಗಿ ಮೀಸಲಿಟ್ಟಿದ್ದ ಹಣವನ್ನು ಅಕ್ರಮವಾಗಿ ಬೇರೆಡೆಗೆ ವರ್ಗಾವಣೆ ಮಾಡಿ ಲೂಟಿ ಮಾಡಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ನಾಗೇಂದ್ರ ಅವರನ್ನು ಪ್ರಮುಖ ಆರೋಪಿಯನ್ನಾಗಿ ಹೆಸರಿಸಲಾಗಿದೆ. ಇಂತಹ ಭ್ರಷ್ಟಾಚಾರದ ಆರೋಪ ಹೊತ್ತಿರುವ ವ್ಯಕ್ತಿಯನ್ನು ಸಂಪುಟದಿಂದ ವಜಾಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.**

### ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಗೆ ಮಂತ್ರಿ ಸ್ಥಾನ: ಎನ್. ಮಹೇಶ್

**ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ವಾಲ್ಮೀಕಿ ನಿಗಮದಿಂದ 187 ಕೋಟಿ ರೂಪಾಯಿಗಳನ್ನು ಚೆಕ್ ಮೂಲಕ ಅಕ್ರಮವಾಗಿ ಪಡೆದು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿರುವ ಪ್ರಕರಣವನ್ನು ಕೇಂದ್ರೀಯ ತನಿಖಾ ದಳ ವಿಚಾರಣೆ ನಡೆಸುತ್ತಿದೆ ಎಂದರು. ಪ್ರಕರಣದಲ್ಲಿ ಕಾರಾಗೃಹ ಸೇರಿ ಜಾಮೀನಿನ ಮೇಲೆ ಹೊರಬಂದಿರುವ ವ್ಯಕ್ತಿಯೊಬ್ಬರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಂಡಿರುವುದು ಸಂವಿಧಾನಕ್ಕೆ ಬಗೆದ ಬಹು ದೊಡ್ಡ ದ್ರೋಹವಾಗಿದೆ. ಇಂತಹ ತೀರ್ಮಾನಗಳು ಆಡಳಿತಾ ರೂಢ ಕಾಂಗ್ರೆಸ್ನ ನೈತಿಕ ಅಧಃಪತನಕ್ಕೆ ಸಾಕ್ಷಿಯಾಗಿದ್ದು, ಬಿ. ನಾಗೇಂದ್ರ ಅವರು ನೈತಿಕ ಹೊಣೆ ಹೊತ್ತು ತಕ್ಷಣ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಜೈಲಿಗೆ ಹೋಗಿ ಬಂದವರನ್ನು ಮತ್ತೆ ಸಚಿವರನ್ನಾಗಿ ಮಾಡುವ ಮೂಲಕ ಸರ್ಕಾರ ಭಂಡತನ ಪ್ರದರ್ಶಿಸುತ್ತಿದೆ ಎಂದು ದೂರಿದರು.**

## ಗಿರಿಜನ, ಆದಿವಾಸಿ ಕುಟುಂಬಗಳಿಗೆ ಪೌಷ್ಟಿಕ ಆಹಾರ ವಿತರಿಸಿ

ಚಾಮರಾಜನಗರ. ಗಿರಿಜನ, ಆದಿವಾಸಿ ಕುಟುಂಬಗಳಿಗೆ ಸರ್ಕಾರ



ಕೂಡಲೇ ಪೌಷ್ಟಿಕ ಆಹಾರ ಪೂರೈಸುವಂತೆ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾಧ್ಯಕ್ಷ ಎನ್.ಸುರೇಶ್ ಆದಿವಾಸಿ ಒತ್ತಾಯಿಸಿದರು.

ಹಲವು ತಿಂಗಳುಗಳಿಂದ ಗಿರಿಜನರಿಗೆ ಸಿಗಬೇಕಾದ ಪೌಷ್ಟಿಕ ಆಹಾರ ಕಿಟ್‌ಗಳು ವಿತರಣೆ ಆಗಿಲ್ಲ. ಆಗಾಗಿ ಅದನ್ನೇ ನಂಬಿರುವ ಗಿರಿಜನ, ಆದಿವಾಸಿ ಜನಾಂಗದವರಿಗೆ ತುಂಬಾ ತೊಂದರೆ ಉಂಟಾಗಿದೆ. ಜಿಲ್ಲೆಯಲ್ಲಿ ಬರ ಆವರಿಸಿದ್ದು, ಕೂಲಿ ಇಲ್ಲದೆ ಜನರು ತುಂಬಾ ಸಂಕಷ್ಟದಲ್ಲಿದ್ದಾರೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಹಾಗೂ ಇಲಾಖೆಯ ಮೂಲಕ ವರ್ಷಪೂರ್ತಿ ಸಕಾಲಕ್ಕೆ ಪೌಷ್ಟಿಕ ಪದಾರ್ಥಗಳನ್ನು ಒದಗಿಸಬೇಕು ಎಂದರು.

**ಹೊಸ ಮನೆ ನಿರ್ಮಿಸಿಕೊಡಿ:** ಹಲವು ಆದಿವಾಸಿ, ಗಿರಿಜನ ಕಾಲೋನಿಗಳಲ್ಲಿ ನಿರ್ಮಿಸಲಾದ ವಸತಿಗಳು ಕಳಪೆ ಕಾಮಗಾರಿಯಿಂದಾಗಿ ಕುಸಿದು ಬೀಳುವ ಹಂತ ತಲುಪಿವೆ. ಮಳೆಗಾಲದಲ್ಲಿ ಸೋರುವುದು, ಗೋಡೆಗಳು ಬಿರುಕು ಬಿಡುವುದು ಮತ್ತು ಮೇಲ್ಚಾವಣಿ ಕುಸಿಯುವ ಭೀತಿಯಿಂದ ಗಿರಿಜನರು ಜೀವಭಯದಲ್ಲಿ ದಿನ ಕಳೆಯುವಂತಾಗಿದೆ. ಆಗಾಗಿ ಅವರಿಗೆ ಸೂಕ್ತ ಮನೆಗಳನ್ನು ನಿರ್ಮಿಸಿಕೊಡಬೇಕು ಎಂದು ಸುರೇಶ್ ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

# ಶ್ರವಣ-ವಾಕ್ ಮಕ್ಕಳ ಉಪಹಾರ ಸೇವೆಗೆ ಚಾಲನೆ




ಮೈಸೂರು: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಮತ್ತು ಅಕ್ಷಯ ಪಾತ್ರ ಫೌಂಡೇಶನ್ ಸಹಯೋಗದೊಂದಿಗೆ ಶ್ರವಣ ಮತ್ತು ವಾಕ್ ದೋಷವುಳ್ಳವರು ಚಿಕಿತ್ಸೆಗಾಗಿ ಸಂಸ್ಥೆಗೆ ಆಗಮಿಸಿದಾಗ ಅವರಿಗೆ ಬೆಳಗಿನ ಉಪಹಾರ ವಿತರಿಸುವ ನೂತನ ಸೇವಾ ಕಾರ್ಯಕ್ರಮನ್ನು ಪಂಚವಟಿ ಕ್ಯಾಂಪಸ್‌ನ ಕುಟೀರ ಆವರಣದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಯುಕೇಶ್ ಕುಮಾರ್ ಚಾಲನೆ ನೀಡಿದರು.

ಇಸ್ಕಾನ್ ಸಂಸ್ಥೆಯ ಶ್ರೀ ಸ್ತೋಕ ಕೃಷ್ಣ ಸ್ವಾಮೀಜಿ ಮಾತನಾಡಿ ಅಕ್ಷಯ ಪಾತ್ರ ಫೌಂಡೇ ಶನ್ ಸಂಸ್ಥೆಯು ಸರ್ಕಾರಿ ಶಾಲೆಗಳ ಮಕ್ಕಳಿಗೆ ಉಚಿತ ಮಧ್ಯಾಹ್ನದ ಊಟ ನೀಡುವ ಜೊತೆಗೆ, ಸಮಾಜದ ಹಿಂದುಳಿದ ಹಾಗೂ ವಿಶೇಷ ಅಗತ್ಯವುಳ್ಳ ಜನರಿಗೂ ತನ್ನ ಸೇವಾ ಚಟುವಟಿಕೆಗಳನ್ನು ವಿಸ್ತರಿಸುತ್ತಿದೆ ಎಂದು ಹೇಳಿದರು. ಪ್ರಸ್ತುತ ಇಸ್ಕಾನ್ ಸಂಸ್ಥೆಯಿಂದ ಸುಮಾರು 20,000ಕ್ಕೂ ಹೆಚ್ಚು ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ತಲುಪಿಸಲಾಗುತ್ತಿದೆ. ಇದು ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಹಾಗೂ ಅಕ್ಷಯ ಪಾತ್ರ ಫೌಂಡೇಶನ್ ಸಂಸ್ಥೆಗಳ ಜಂಟಿ ಯೋಜನೆಯಾಗಿದೆ. ಈ ಯೋಜನೆಯ ಯಶಸ್ಸಿನ ಜೊತೆಗೆ ಸಮಾಜದ ಬಡ ಹಾಗೂ ಅಂಧ/ವಿಶೇಷ ಚೇತನ ವ್ಯಕ್ತಿಗಳಿಗೂ ನೆರವಾಗುವ ಹಲವು ನೂತನ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಸಂಸ್ಥೆಯು ಮುಂಬರುವ ದಿನಗಳಲ್ಲಿ ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲು ಎದುರು ನೋಡುತ್ತಿದ್ದು, ಶ್ರವಣ ಮತ್ತು ವಾಕ್ ದೋಷವುಳ್ಳ ಮಕ್ಕಳಿಗೆ ಮತ್ತು ಸಮಾಜದ ಅಗತ್ಯವಿರುವ ವರ್ಗಕ್ಕೆ ನಿರಂತರವಾಗಿ ನೆರವಾಗಲು ಬದ್ಧವಾಗಿದೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಪುಷ್ಪಾವತಿ ಮಾತನಾಡಿ ಈ ಸಂಸ್ಥೆಗೆ ಬರುವ ಮಕ್ಕಳು ಹಾಗೂ ಅವರ ಪೋಷಕರ ಅಗತ್ಯತೆಗಳನ್ನು ಅರ್ಥೈಸಿಕೊಂಡು, ಅವರಿಗೆ ಬೆಳಗಿನ ವೇಳೆಯಲ್ಲಿ ಪೌಷ್ಟಿಕ ಹಾಗೂ ತಾಜಾ ತಿಂಡಿ ತಲುಪಿಸಲು ಚಿಂತಿಸಿದ ಸಂದರ್ಭದಲ್ಲಿ,ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಶೇಷ ಕಾಳಜಿ ವಹಿಸಿ ಅಕ್ಷಯ ಪಾತ್ರ ಪೌಂಡೇಷನ್ ಜೊತೆಯಲ್ಲಿ ಚರ್ಚಿಸಿ ಬೆಳಗಿನ ಉಪಹಾರ ಒದಗಿಸಲು ಸಹಕರಿಸಿದ್ದಾರೆ ಎಂದರು.

### ಎಸ್‌ಐಟಿ ತನಿಖೆಗೆ ಐವನ್ ಡಿಸೋಜಾ ಆಗ್ರಹ

# ಅರಣ್ಯಾಧಿಕಾರಿಗಳ ಗುಂಡಿನ ದಾಳಿಗೆ ಮೃತಪಟ್ಟವರ ಅಂತ್ಯಕ್ರಿಯೆ



ಚಾಮರಾಜನಗರ. ಕಾವೇರಿ ವನ್ಯಜೀವಿಧಾಮದಲ್ಲಿ ಅರಣ್ಯಾಧಿಕಾರಿಗಳ ಗುಂಡಿನ ದಾಳಿಗೆ ಮೃತಪಟ್ಟ ಮೂವರ ಅಂತ್ಯಕ್ರಿಯೆಯು ಕ್ರೈಸ್ತ ಧರ್ಮದ ಸಂಪ್ರದಾಯದಂತೆ ನಡೆಯಿತು.

ಇದಕ್ಕೂ ಮುನ್ನ, ಮರಿಯಮಂಗಲದ ಆಂತೋಣಿಸ್ವಾಮಿ ಪೀಟರ್ ಹಾಗೂ ತೋಮಿಯಾರ್ ಪಾಳ್ಯದ ಡೇವಿಡ್ ಕುಮಾರ್ ಕುಟುಂಬಸ್ಥರು ಪೂಜೆ ಸಲ್ಲಿಸಿ ತೋಮಿಯಾರ್ ಪಾಳ್ಯದ ಚರ್ಚ್‌ಗೆ ಮೃತದೇಹಗಳನ್ನು ತಂದು ಪೂಜೆ ಸಲ್ಲಿಸಿದರು. ಚರ್ಚ್‌ನ ಪಾದ್ರಿ ಕೆ. ಚಾರ್ಲ್ಸ್ ನೇತೃತ್ವದಲ್ಲಿ ಎರಡು ತಾಸುಗಳಿಗೂ ಅಧಿಕ ಸಮಯ ಪ್ರಾರ್ಥನೆ ಸಲ್ಲಿಸಲಾಯಿತು. ಈ ಸಾಮೂಹಿಕ ಪ್ರಾರ್ಥನೆಯಲ್ಲಿ ಮೈಸೂರು, ಚಾಮರಾಜನಗರದ 18 ಚರ್ಚ್‌ಗಳ ಪಾದ್ರಿಗಳು, ಕುಟುಂಬಸ್ಥರು, ಗ್ರಾಮಸ್ಥರು ಭಾಗಿಯಾಗಿದ್ದರು.

ಪ್ರಾರ್ಥನೆ ಮುಗಿದ ಬಳಿಕ ಮೂವರ ಅಂತ್ಯಕ್ರಿಯೆಯು ಅವರವರ ಸ್ವಗ್ರಾಮದ ಸ್ಮಶಾನದಲ್ಲಿ ಕ್ರೈಸ್ತ ಸಮುದಾಯದ ಸಂಪ್ರದಾಯದಂತೆ ತೋಮಿಯರ್ ಪಾಳ್ಯ ಚರ್ಚ್‌ನ ಫಾದರ್ ಕೆ. ಚಾರ್ಲ್ಸ್ ನೇತೃತ್ವದಲ್ಲಿ ನಡೆಯಿತು. ಅಂತ್ಯಕ್ರಿಯೆಗಳಲ್ಲಿ ಶಾಸಕ ಎಂ.ಆರ್. ಮಂಜುನಾಥ್ ಭಾಗಿಯಾಗಿದರು. ಸಾಮೂಹಿಕ ಪ್ರಾರ್ಥನೆಗೂ ಮುನ್ನ, ಮೃತರ ಕುಟುಂಬಗಳಿಗೆ ತೆರಳಿ ಪರಿಹಾರ ವಿತರಿಸಿದ್ದರು. ಅಂತ್ಯಕ್ರಿಯೆಯಲ್ಲಿ ಬಂಧು-ಬಳಗ ಹಾಗೂ ಮಾರ್ಟಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ತೋಮಿಯರ್ ಪಾಳ್ಯ ಚರ್ಚ್‌ನಲ್ಲಿ ನಡೆದ ಪ್ರಾರ್ಥನೆ ಹಾಗೂ ಮೂವರ ಮನೆಗಳ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಅಂತ್ಯಕ್ರಿಯೆ ನಡೆಯುವ ಸ್ಥಳಗಳಲ್ಲಿಯೂ ಸಹ ಐಜಿಪಿ ಬೋರಲಿಂಗಯ್ಯ ಅವರ ಸೂಚನೆಯ ಮೇರೆಗೆ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಬಿಗಿ ಭದ್ರತೆ ಕೈಗೊಂಡಿದ್ದರು.

**ಐವನ್ ಡಿಸೋಜಾ ಭೇಟಿ**

ವಿಧಾನ ಪರಿಷತ್ ಸದಸ್ಯ ಹಾಗೂ ಕ್ರೈಸ್ತ ಸಮುದಾಯದ ಮುಖಂಡ ಐವನ್ ಡಿಸೋಜಾ ಅವರು ಮೃತರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು. ಬಳಿಕ ಮಾತನಾಡಿದ ಅವರು, ಮೃತರ ಕುಟುಂಬದ ದುಃಖದಲ್ಲಿ ತಾನು ಕೂಡ ಭಾಗಿಯಾಗಿದ್ದು, ಘಟನೆ ಬಗ್ಗೆ ನ್ಯಾಯಸಮ್ಮತವಾದ ತನಿಖೆ ನಡೆಸಬೇಕು. ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.ಅರಣ್ಯಾಧಿಕಾರಿಗಳ ಕ್ರಮವನ್ನು ಕ್ಷಮಿಸಲು ಸಾಧ್ಯವಿಲ್ಲ, ಅವರು ಮಿತಿಮೀರಿ ವರ್ತಿಸಿದ್ದಾರೆ. ಯಾರಿಗೂ, ಯಾರ ಜೀವವನ್ನೂ ತೆಗೆಯುವ ಅಧಿಕಾರ ಇಲ್ಲ. ಬಂದೂಕನ್ನು ಯಾವಾಗ ಬಳಸಬೇಕು ಎಂಬ ಪರಿಜ್ಞಾನ ಅಧಿಕಾರಿಗಳಿಗೆ ಇರಬೇಕಿತ್ತು. ಮೂವರು ಅಮಾಯಕರನ್ನು ಬಲಿ ತೆಗೆದುಕೊಳ್ಳಲು ಅಧಿಕಾರ ಕೊಟ್ಟವರು ಯಾರು? ಇಡೀ ಘಟನೆ ಖಂಡನೀಯ ಎಂದು ಐವನ್ ಡಿಸೋಜಾ ಕಿಡಿಕಾರಿದರು.

**1 ಕೋಟಿ ರೂ. ಪರಿಹಾರ, ಸರ್ಕಾರಿ ನೌಕರಿ ನೀಡಿ**

ನ್ಯಾಯಾಂಗ ತನಿಖೆಗೆ ಸಾಕಷ್ಟು ಸಮಯ ಬೇಕಾಗುವುದರಿಂದ ಎಸ್‌ಐಟಿ ತನಿಖೆಯೇ ಸೂಕ್ತ. ಎಸ್‌ಐಟಿ ತನಿಖೆ ನಡೆದರೆ ತಪ್ಪಿತಸ್ಥರಿಗೆ ಖಂಡಿತವಾಗಿಯೂ ಶಿಕ್ಷೆ ಆಗುತ್ತದೆ. ಮೃತರ ಕುಟುಂಬಗಳಿಗೆ ಕನಿಷ್ಠ 1 ಕೋಟಿ ರೂ. ಪರಿಹಾರ ಘೋಷಿಸಬೇಕು. ಕುಟುಂಬದ ತಲಾ ಒಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದು ಸರ್ಕಾರವನ್ನು ಅವರು ಒತ್ತಾಯಿಸಿದರು.

# ಆಗಸ್ಟ್– ಸೆಪ್ಟಂಬರ್‌ನಲ್ಲಿ ಬರುವ ಮಹನೀಯರ ಜಯಂತಿ ಅರ್ಥಪೂರ್ಣವಾಗಿ ಆಚರಿಸಿ: ಎಡಿಸಿ




**ಮಂಡ್ಯ:** ಆಗಸ್ಟ್ ಮಾಹೆಯಲ್ಲಿ ಬರುವ ಮಹನೀಯರ ಜಯಂತಿಗಳಾದ ಆಗಸ್ಟ್ 28 ರಂದು ನುಲಿಯ ಚಂದಯ್ಯ ಜಯಂತಿ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಮತ್ತು ಸೆಪ್ಟೆಂಬರ್ 04 ರಂದು ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮಗಳನ್ನು ಎಲ್ಲರ ಸಹಕಾರ, ಸಮನ್ವಯತೆ ಹಾಗೂ ಸಾಮರಸ್ಯದಿಂದ ಮಹನೀಯರ ಚಿಂತನೆ ಮತ್ತು ಆದರ್ಶಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಅರ್ಥ ಪೂರ್ಣವಾಗಿ ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ. ಸಿ. ಶಿವಾನಂದಮೂರ್ತಿ ರವರು ಹೇಳಿದರು.

ಮಂಡ್ಯ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ನಡೆದ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಬರುವ ಮಹನೀಯರು ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಹನೀಯರ ಜನ್ಮ ದಿನದ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಗಣ್ಯರಿಗೆ ಹಾಗೂ ಎಲ್ಲಾ ಅಧಿಕಾರಿಗಳು ಹಾಗೂ ಸಂಘ ಸಂಘಟನೆಗಳಿಗೆ ತಲುಪಿಸುವಂತೆ ಸೂಚಿಸಿದರು.

ವೇದಿಕೆಯನ್ನುಸ್ವಚತೆಯಿಂದನೋಡಿಕೊಳ್ಳುವುದು. ಮಹನೀಯರ ಭಾವಚಿತ್ರಗಳ ಬ್ಯಾನರ್ ಗಳನ್ನು ಅಳವಡಿಸಬೇಕು ಮತ್ತು ಸಮುದಾಯದಲ್ಲಿ ಸಾಧನೆ ಮಾಡಿರುವಂತಹ ಸಮುದಾಯದ ಗಣ್ಯರಿಗೆ ಗೌರವವನ್ನು ಸೂಚಿಸಬೇಕು.ಸಮುದಾಯದ ವಿಚಾರಕರು ಮತ್ತು ಚಿಂತಕರಿಂದ ಸಮುದಾಯದ ಅರಿವಿನ ಬಗ್ಗೆ ಉಪನ್ಯಾಸವನ್ನು ಮಾಡಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಬಿ. ವಿ. ನಂದೀಶ್, ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಸ್ವಾಮಿ ಜಿ. ಎಸ್ ಹಾಗೂ ಸಮುದಾಯದ ಮುಖಂಡರುಗಳಾದ ಅಮ್ಜದ್ ಪಾಶ, ರಾಜ್ ಕುಮಾರ್, ಶ್ರೀನಿವಾಸ್, ಸೋಮಶೇಖರ್, ರಮೇಶ್ ರವರು ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆ ನನ್ನ ಹಕ್ಕು ಘೋಷಣೆಯೊಂದಿಗೆ ನ.28ರಿಂದ ಅನಿರ್ದಿಷ್ಟ ಉಪವಾಸ: ಇಂಡುವಾಳು ಚಂದ್ರಶೇಖರ್

**ಮಂಡ್ಯ:** ರಾಜ್ಯದಲ್ಲಿ ಏಕರೂಪ ಸಮಾನ ಶಿಕ್ಷಣ ನೀತಿ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನ.28ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ರಾಜ್ಯ ಎಸ್‌ಡಿಎಂಸಿ ಸಂಘ, ಸರಕಾರಿ ಶಾಲೆಯಗಳ ಹಿರಿಯ ವಿದ್ಯಾರ್ಥಿಗಳ ಬಳಗ ಹಾಗೂ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಸರಕಾರವನ್ನು ಎಚ್ಚರಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಕಳೆದ ವರ್ಷದ ಡಿಸೆಂಬರ್‌ನಲ್ಲಿ 3 ದಿನ ಉಪವಾಸ ಸತ್ಯಾಗ್ರಹ. 2026ರ ಜ.26ರ ಕಪ್ಪು ಬಾವುಟ ಪ್ರದರ್ಶನ, ಮಂಡ್ಯ ಜಿಲ್ಲೆಯಲ್ಲಿ ನಡೆದ ಐತಿಹಾಸಿಕ 1295 ಕಿ.ಮೀ. ಪಾದಯಾತ್ರೆ ಹಾಗೂ ಸಾವಿರಾರು ಸಾರ್ವಜನಿಕರ ಪಂಚಿನ ಮೆರವಣಿಗೆ ಮಾಡಲಾಗಿದೆ. ಆದರೂ ಸರಕಾರ ಜವಾಬ್ದಾರಿಯುತವಾಗಿ ಸ್ಪಂದಿಸಿಲ್ಲ. ಹೀಗಾಗಿ ಈ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.




ಸತ್ಯಾಗ್ರಹದ ಸಂದರ್ಭದಲ್ಲಿ ಸರಕಾರಿ ಶಾಲೆಗಳ ಸಮಸ್ಯೆಗಳನ್ನು ಬಗೆಹರಿಸಲು ಸಲ್ಲಿಕೆಯಾಗಿರುವ ಲಕ್ಷಾಂತರ ಅರ್ಜಿಗಳ ಪ್ರತಿಗಳಿಂದ ಮುಖ್ಯಮಂತ್ರಿಗಳ ಪ್ರತಿಮೆಯ ತುಲಾಭಾರ ನಡೆಸಲಾಗುವುದು. "ಸರ್ಕಾರಿ ಶಾಲೆ ನನ್ನ ಹಕ್ಕು" ಮತ್ತು "ಏಕರೂಪ ಶಿಕ್ಷಣ ನೀತಿ ಬೆಂಬಲಿಸದ ದಲ್ಲಾಳಿಗಳಿಗೆ ಮತ ನೀಡುವುದಿಲ್ಲ" ಎಂಬ ಪ್ರತಿಜ್ಞೆಯೊಂದಿಗೆ ಈ ಶಿಕ್ಷಣ ಕ್ರಾಂತಿಗೆ ಕರೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ರಾಜ್ಯದ 41,905 ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿಯಿಂದ 5ನೇ ತರಗತಿಯವರೆಗೆ ದ್ವಿಭಾಷೆಯಲ್ಲಿ ಸಿಬಿಎಸ್ಸಿ ಗುಣಮಟ್ಟದ ಶಿಕ್ಷಣ ಮತ್ತು ಮೂಲಭೂತ ಸೌಕರ್ಯ ಒದಗಿಸಬೇಕು. ಪ್ರತಿ ಗ್ರಾ.ಪಂ. ವ್ಯಾಪ್ತಿಯಲ್ಲಿ 6 ರಿಂದ 12ನೇ ತರಗತಿಯವರೆಗೆ ನವೋದಯ ಮಾದರಿಯ ಸಿಬಿಎಸ್ಸಿ ಗುಣಮಟ್ಟದ ವಸತಿ ಶಾಲೆ ಪ್ರಾರಂಭಿಸಬೇಕು. ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ 80 ಸಾವಿರ ಹುದ್ದೆಗಳ ತಕ್ಷಣ ಭರ್ತಿ ಹಾಗೂ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸಬಾರದು. ಸರಕಾರಿ ನೌಕರರ ಮಕ್ಕಳು ಕಡ್ಡಾಯವಾಗಿ ಸರಕಾರಿ ಶಾಲೆಯಲ್ಲೇ ಓದಬೇಕು. ಸರಕಾರಿ ಶಾಲಾ ಕಟ್ಟಡಗಳ ಕಳಪೆ ಕಾಮಗಾರಿಯನ್ನು ಎಸ್‌ಐಟಿ ತನಿಖೆಗೆ ಒಳಪಡಿಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಲಾಗುವುದೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಡ್ಯ ಜಿಲ್ಲಾ ರೈತ ಸಂಘದ ಬನ್ನೂರು ನಾರಾಯಣ್, ಶಿವರಾಮು, ತುಮಕೂರು ಯೋಗೇಶ್ ಗೌಡ, ಸಂತೋಷ್ ಮಂಡ್ಯಗೌಡ, ಧನುಷ್‌ಗೌಡ ಇದ್ದರು.

# ಆ 27–28 ರಂದು ಮದ್ದೂರು ತಾಲ್ಲೂಕಿಗೆ ಉಪ ಲೋಕಾಯುಕ್ತರ ಭೇಟಿ

**ಮಂಡ್ಯ:** ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಆಗಸ್ಟ್ 27 ಮತ್ತು 28ರಂದು ಮದ್ದೂರು ತಾಲ್ಲೂಕಿಗೆ ಭೇಟಿ ನೀಡಿ ವಿವಿಧ ಸ್ಥಳಗಳಿಗೆ ತೆರಳಿ ಪರಿಶೀಲನೆ ನಡೆಸಲಿರುವ ಹಿನ್ನೆಲೆಯಲ್ಲಿ, ಪ್ರಕರಣಗಳು ಹಾಗೂ ಸಾರ್ವಜನಿಕರ ದೂರುಗಳ ಗುಣಮಟ್ಟದ ವಿಲೇವಾರಿಗೆ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಸೂಚಿಸಿದರು.




ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಉಪಲೋಕಾಯುಕ್ತ

ನ್ಯಾಯಮೂರ್ತಿಯವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿಗೆ ಭೇಟಿ ನೀಡಲಿರುವುದರಿಂದ ಮದ್ದೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿ ತನಿಖೆಗೆ ಬಾಕಿ ಇರುವ ದೂರು ಪ್ರಕರಣಗಳ ವಿಚಾರಣೆ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಉಪಲೋಕಾಯುಕ್ತರ ಭೇಟಿ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಪೂರ್ವಸಿದ್ಧತೆ, ಶಿಷ್ಟಾಚಾರ, ಭದ್ರತೆ, ವಸತಿ, ಸಭಾಂಗಣ ವ್ಯವಸ್ಥೆ ಹಾಗೂ ವಿವಿಧ ಇಲಾಖೆಗಳ ಜವಾಬ್ದಾರಿಗಳ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು.

ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾಗದಂತೆ ಕ್ರಮವಹಿಸಿ

ಉಪಲೋಕಾಯುಕ್ತರ ಭೇಟಿ ಸಂದರ್ಭದಲ್ಲಿ ಯಾವುದೇ ರೀತಿಯ ಲೋಪವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಸಮನ್ವಯದಿಂದ ನಿರ್ವಹಿಸಬೇಕು. ಈಗಾಗಲೇ ಸ್ವೀಕರಿಸಿರುವ ದೂರುಗಳು ಹಾಗೂ ಪ್ರಕರಣಗಳನ್ನು ಪರಿಶೀಲಿಸಿ, ಅವುಗಳ ವಿಲೇವಾರಿ ಪ್ರಗತಿಯನ್ನು ಸಮಗ್ರವಾಗಿ ಪರಿಶೀಲಿಸಬೇಕು. ಬಾಕಿ ಇರುವ ಪ್ರಕರಣಗಳ ವಿಲೇವಾರಿಗೆ ಆದ್ಯತೆ ನೀಡಿ, ನಿಯಮಾನುಸಾರ ಗುಣಮಟ್ಟದ ಪರಿಹಾರ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

**ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳಿ:** ಉಪಲೋಕಾಯುಕ್ತರ ಮುಂದೆ ವಿಚಾರಣೆಗೆ ಬರುವ ಪ್ರಕರಣಗಳಿಗೆ ಸಂಬಂಧಿಸಿದ ಕಡತಗಳು, ದಾಖಲೆಗಳು, ವರದಿಗಳು ಹಾಗೂ ಅಗತ್ಯ ಮಾಹಿತಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಳ್ಳಬೇಕು. ನಿಗದಿತ ಸಮಯಕ್ಕೆ ಅಗತ್ಯ ದಾಖಲೆಗಳೊಂದಿಗೆ ಹಾಜರಿದ್ದು, ಕೇಳಲಾಗುವ ಮಾಹಿತಿಯನ್ನು ಸ್ಪಷ್ಟವಾಗಿ ಒದಗಿಸಬೇಕು ಎಂದರು.

**ಸ್ಥಳ ಪರಿಶೀಲನೆಗೆ ಅಗತ್ಯ ಸಿದ್ಧತೆ:** ಉಪಲೋಕಾಯುಕ್ತರು ಮದ್ದೂರು ತಾಲ್ಲೂಕಿನ ವಿವಿಧ ಸ್ಥಳಗಳಿಗೆ ತೆರಳಿ ಪರಿಶೀಲನೆ ನಡೆಸಲಿರುವ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸ್ಥಳ ಪರಿಶೀಲನೆಗೆ ಅಗತ್ಯವಿರುವ ಎಲ್ಲ ದಾಖಲೆಗಳು ಹಾಗೂ ಮಾಹಿತಿಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಪರಿಶೀಲನೆ ನಡೆಯುವ ಸ್ಥಳಗಳಲ್ಲಿ ಅಧಿಕಾರಿಗಳು ಖುದ್ದಾಗಿ ಹಾಜರಿದ್ದು, ಅಗತ್ಯ ಸಹಕಾರ ನೀಡಬೇಕು ಎಂದು ಸೂಚಿಸಿದರು.

ಸಮನ್ವಯದಿಂದ ಕಾರ್ಯನಿರ್ವಹಿಸಿ

ಸಾರ್ವಜನಿಕರ ದೂರುಗಳಿಗೆ ಪರಿಣಾಮಕಾರಿ ಹಾಗೂ ನಿಯಮಬದ್ಧ ಪರಿಹಾರ ಒದಗಿಸುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ, ಸಾರ್ವಜನಿಕರಿಗೆ ನ್ಯಾಯಯುತ ಪರಿಹಾರ ದೊರಕುವಂತೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾಧಿಕಾರಿ ಚಂದ್ರಶೇಖರ್, ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಬ್ಯಾಟರಾಯಗೌಡ ಬಿ.ಪಿ, ರವಿಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಿ.ದೇವರಾಜು ಅರಸು ರವರ 111 ನೇ ಜನ್ಮ ದಿನಾಚರಣೆ ಕುರಿತು ಪೂರ್ವಭಾವಿ ಸಭೆ

**ಕೊಳ್ಳೇಗಾಲ:** ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಇಂದು ಡಿ.ದೇವರಾಜು ಅರಸು ರವರ 111 ನೇ ಜನ್ಮ ದಿನಾಚರಣೆ ಕುರಿತು ಪೂರ್ವಭಾವಿ ಸಭೆಯನ್ನು ತಹಶಿಲ್ದಾರ್ ಬಸವರಾಜು ಅಧ್ಯಕ್ಷತೆಯಲ್ಲಿ ನಡೆಯಿತು.

ತಹಶಿಲ್ದಾರ್ ಬಸವರಾಜು ಮಾತನಾಡಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರರಾದ ಡಿ.ದೇವರಾಜು ಅರಸು ರವರ ಜಯಂತಿಯನ್ನು ಆ.20 ರಂದು ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಹನೂರು ಶಾಸಕ ಎಂ.ಆರ್.ಮಂಜುನಾಥ್ ರವರು ಸಹಾ ಉಪಸ್ಥಿತಿ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.85 ಕ್ಕಿಂತ ಅಧಿಕ ಅಂಕ ಗಳಿಸಿದ್ದ ನಿಲಯದ ಇಬ್ಬರು ವಿದ್ಯಾರ್ಥಿಗಳು ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆದ 9 ನಿಲಯದ ವಿದ್ಯಾರ್ಥಿಗಳು ಮತ್ತು ಚಿನ್ನದ ಪದಕ ಗಳಿಸಿದ್ದ ಬಿ.ಎ ವಿದ್ಯಾರ್ಥಿರೊಬ್ಬರಿಗೆ ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಕಸಾಪ ಅಧ್ಯಕ್ಷ ಕೊಂಗರಹಳ್ಳಿ ನಾಗರಾಜು ಮಾತನಾಡಿ, ದೇವರಾಜು ಅರಸು ಜಯಂತಿ ದಿನದಂದು ಕ್ರೀಡೆಯಲ್ಲಿ ಸಾಧನೆ ಮಾಡಿದ್ದ ಮಕ್ಕಳಿಗೆ ಸನ್ಮಾನಿಸುವಂತೆ ಸಲಹೆ ನೀಡಿದರು.

ಇದಕ್ಕೆ ಕ್ಷೇತ್ರಾ ಶಿಕ್ಷಣಾಧಿಕಾರಿ ಕಚೇರಿಯಿಂದ ಮಾಹಿತಿ ಪಡೆದು ಸನ್ಮಾನಿಸುವುದಾಗಿ ಇದೇ ಸಂಧರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮೀನಾ ತಿಳಿಸಿದರು.

ಈ ಪೂರ್ವಭಾವಿ ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮೀನಾ, ಕಚೇರಿ ಸಿಬ್ಬಂದಿ ಶಿವರಾಜು ನಿಲಯ ಪಾಲಕರು ಪ್ರವೀಣ್, ಸುನೀಲ್, ನೇತ್ರಕಲಾ,ಸುಶ್ಮಾ ಹಾಗೂ ಎಲ್ಲಾ ಅಧಿಕಾರಿಗಳು ಇದ್ದರು.






# ಚಾಮರಾಜನಗರ ಲಯನ್ಸ್ ಸಂಸ್ಥೆ ನೂತನ ಅಧ್ಯಕ್ಷರಾಗಿ ಬಿ.ಎಂ.ಪ್ರಭುಸ್ವಾಮಿ ಲಯನ್ಸ್ ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ




**ಚಾಮರಾಜನಗರ.** ಲಯನ್ಸ್ ಸಂಸ್ಥೆಯು ವಿಶ್ವದ ಅತಿ ದೊಡ್ಡ ಸ್ವಯಂ ಸೇವಾ ಸಂಸ್ಥೆಯಾಗಿದೆ ಎಂದು ಲಯನ್ಸ್ ಸಂಸ್ಥೆಯ ಮಾಜಿ ಜಿಲ್ಲಾ ರಾಜ್ಯಪಾಲ ಕೃಷ್ಣಗೌಡ ಹೇಳಿದರು.

ನಗರದ ಹೋಟೆಲ್ ನಂದಿ ಇನ್ ಸಭಾಂಗಣದಲ್ಲಿ ಲಯನ್ಸ್ ಸಂಸ್ಥೆ ವತಿಯಿಂದ ನಡೆದ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪದವಿ ಪ್ರದಾನ ಹಾಗೂ ನೂತನ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧನ ಕಾರ್ಯಕ್ರಮದಲ್ಲಿ ನೂತನ ಪದಾಧಿ ಕಾರಿಗಳಿಗೆ ಪ್ರತಿಜ್ಞಾವಿಧಿ ಭೋದಿಸಿ ಮಾತನಾಡಿದರು. 1917ರಲ್ಲಿ ಆರಂಭವಾದ ಲಯನ್ಸ್ ಸಂಸ್ಥೆಯು ಸಮಾಜಸೇವೆ, ಆರೋಗ್ಯ ಶಿಬಿರ, ನೇತ್ರದಾನದಂತಹ ಜನ ಕಾರ್ಯಗಳಲ್ಲಿ ತೊಡಗಿಕೊಂಡಿದೆ ಎಂದರು.

ದಿನನಿತ್ಯ ಹಲವಾರು ಸಂಘ–ಸಂಸ್ಥೆ ಹುಟ್ಟುತ್ತವೆ. ಹಾಗೆಯೇ ಮುಚ್ಚಿ ಹೋಗುತ್ತಿವೆ ಆದರೆ ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯು 109 ವರ್ಷಗಳಿಂದ ನಿರಂತರವಾಗಿ ಪ್ರಪಂಚದಲ್ಲೇ. ಸೇವೆ ಮಾಡುತ್ತಿದೆ. ಚಾಮರಾಜನಗರದಲ್ಲಿ 45 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಲಯನ್ಸ್ ಬಂಧುಗಳಿಗೆ ಈ ಮೂಲಕ ಅಭಿನಂದನೆ ಸಲ್ಲಿಸುವೆ ಎಂದರು.

2ನೇ ಉಪ ಜಿಲ್ಲಾ ರಾಜ್ಯಪಾಲ ಎಂ.ಸಿದ್ದೇಗೌಡ ನೂತನ ಸದಸ್ಯರಿಗೆ ಪ್ರತಿಜ್ಞಾವಿಧಿ ಭೋಧಿಸಿ ಮಾತನಾಡಿ, ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆಯು ಅತ್ಯಂತ ಯಶ್ವಸಿಯಾಗಿ ಚಾಮರಾಜನಗರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಲಯನ್ಸ್ ಸೇವಾ ಸಂಸ್ಥೆಯ ಪ್ರಪಂಚದಲ್ಲಿ ಸೇವಾ ಸಂಸ್ಥೆಗಳಲ್ಲಿ ಮೊದಲನೆಯದಾಗಿದೆ. ಪ್ರಪಂಚದಲ್ಲಿ 12 ಮಿಲಿಯನ್ ಸದಸ್ಯರನ್ನು ಹೊಂದಿದೆ. 214 ದೇಶಗಳಲ್ಲಿ ಲಯನ್ಸ್ ಸಂಸ್ಥೆ ಪಸರಿಸಿದೆ ಎಂದರು.

ಸೈಬರ್ ಕ್ರೈಂ ವಿಭಾಗ ಉಪಪೊಲೀಸ್ ಅಧೀಕ್ಷಕ ಎಂ.ಎಸ್.ಪವನ್‌ಕುಮಾರ್ ಮಾತನಾಡಿ, ಪ್ರತಿ ಕ್ಷಣವೂ ಸೈಬರ್ ಅಪರಾಧಗಳು ಜಾಸ್ತಿಯಾಗುತ್ತಿದ್ದು, ಆದರಿಂದ ಮೋಸ

ಹೋಗಿರುವವರೇ ಹೆಚ್ಚಾಗಿದ್ದು, ಹೆಚ್ಚಿನ ಪ್ರಕರಣ ದಾಖಲಾಗುತ್ತಿದೆ. ಆಗಾಗಿ ಮೊಬೈಲ್ ಫೋನ್ ಬಳಸುವಾಗ ಎಚ್ಚರಿಕೆ ಬಳಸಬೇಕು ಯಾವುದೇ ಓಟಿಪಿ ಶೇರ್ ಮಾಡಬೇಡಿ, ಆಮಿಷಗಳಿಗೆ ಹೋಗಬೇಡಿ. ನಿಮ್ಮ ಹಣವನ್ನು ಡಬಲ್ ಮಾಡಿಕೊಡುತ್ತೇವೆ. ನಿಮ್ಮ ಮಕ್ಕಳಿಗೆ ಸರ್ಕಾರಿ ಕೆಲಸ ಕೊಡಿಸುತ್ತೇವೆ ಎಂದು ಆಫರ್ ಕೊಡುತ್ತಾರೆ ಇದರಿಂದ ಹುಷಾರಾಗಿ ಇರಬೇಕು ಎಂದು ಸೈಬರ್ ಕ್ರೈಂ ಕುರಿತು ಜಾಗೃತಿ ಮೂಡಿಸಿದರು.

ಲಯನ್ಸ್ ಸೇವಾ ಭವನ ನಿರ್ಮಿಸಲು ಶ್ರಮಿಸುವೆ : ನೂತನ ಅಧ್ಯಕ್ಷರಾಗಿ ಅಧಿಕಾರಿ ಸ್ವೀಕರಿಸಿದ ಬಿ.ಎಂ.ಪ್ರಭುಸ್ವಾಮಿ ಮಾತನಾಡಿ, ನಿಕಟಪೂರ್ವ ಅಧ್ಯಕ್ಷರ ಸಲಹೆ, ಲಯನ್ಸ್ ಬಂಧುಗಳ ಸಹಕಾರದಿಂದ ಚಾಮರಾಜನಗರದಲ್ಲಿ ಸೇವೆ ಅನ್ನುವ ಹೆಜ್ಜೆ ಗುರುತನ್ನು ಮೂಡಿಸುವ ನಿಟ್ಟಿನಲ್ಲಿ ಕೆಲಸ ಮಾಡುವೆ. ಬಸವಣ್ಣನವರ ಕಾಯಕ, ದಾಸೋಹ, ಸೇವೆ ತತ್ವದಡಿಯಲ್ಲಿ ಲಯನ್ಸ್ ಸಂಸ್ಥೆಯ ಸ್ನೇಹ, ಸೇವೆ, ಸತ್ಸಂಗ, ಇವನ್ನು ಜೀವನದಲ್ಲಿ ಅಳವಡಿಸಿಕೊಂಡು ಎಲ್ಲರ ವಿಶ್ವಾಸದೊಂದಿಗೆ ಸಮಾಜಕ್ಕೆ ನನ್ನಿಂದ ಸಾಧ್ಯವಾಗುವ ಸೇವೆ ಮಾಡಲು ಪ್ರಯತ್ನ ಮಾಡುತ್ತೇನೆ. ಅತಿ ಶೀಘ್ರದಲ್ಲೇ ಸೇವಾಭವನ ಕಟ್ಟುಲು ಪ್ರಯತ್ನ ಮಾಡುವೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿಕಟಪೂರ್ವ ಅಧ್ಯಕ್ಷ ಡಾ.ಎಂ.ಬಸವರಾಜೇಂದ್ರ ಮಾತನಾಡಿ, ಲಯನ್ಸ್ ಸಂಸ್ಥೆ ವತಿಯಿಂದ ಚಾಮರಾಜನಗಕ್ಕೆ ಒಳ್ಳೆಯ ಸೇವೆ ನೀಡಲು ಪಣತೊಟ್ಟಿದ್ದೇವೆ. ಅದಕ್ಕಾಗಿ ನಾವು ಬದ್ಧರಾಗಿದ್ದೇವೆ. ನೂತನ ಅಧ್ಯಕ್ಷರಿಗೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿದರು.

ನೂತನ ಸದಸ್ಯರು ಸೇರ್ಪಡೆ : ಅಮಚವಾಡಿ ವೀರಭದ್ರನಾಯಕ, ಅಮಚವಾಡಿ: ರಾಜು. ಮಹೇಶ್ ಮತ್ತು ಈಶ ಲಯನ್ಸ್ ನೂತನ ಸದಸ್ಯರಾಗಿ ಸೇರ್ಪಡೆಯಾದರು. ಕಾರ್ಯಕ್ರಮದಲ್ಲಿ ಪ್ರಾಂತೀಯ ಆರ್.ರಮೇಶ್ ಕುಮಾರ್, ವಲಯ ಅಧ್ಯಕ್ಷ ಕೆ.ಸುರೇಶ್ ಕುಮಾರ್, ಕಾರ್ಯದರ್ಶಿ ಟಿ.ಎಂ.ರಂಗಸ್ವಾಮಿ, ಖಜಾಂಚಿ ಕನ್ನಯ್ಯಲಾಲ್ ಜೈನ್ ಪದಾಧಿಕಾರಿಗಳು ಹಾಜರಿದ್ದರು.

# ಚಾಮರಾಜನಗರ: ಕಣ್ಣೀರಲ್ಲಿ ಕರಗಿದ ಶಾಗ್ಯ ಪ್ರಕರಣ – 3 ಮಂದಿಯ ಅಂತ್ಯಕ್ರಿಯೆ ಕ್ರೈಸ್ತ ಸಂಪ್ರದಾಯದಂತೆ

**ಚಾಮರಾಜನಗರ:** ಕಾವೇರಿ ವನ್ಯಜೀವಿಧಾಮದ ಶಾಗ್ಯ ಅರಣ್ಯದಲ್ಲಿ ಅರಣ್ಯಾಧಿಕಾರಿಗಳ ಗುಂಡಿಗೆ ಬಲಿಯಾದ ಮೂವರ ಅಂತ್ಯಕ್ರಿಯೆ ಭಾನುವಾರ ಕ್ರೈಸ್ತ ಧರ್ಮದ ಸಂಪ್ರದಾಯದಂತೆ ನೆರವೇರಿತು. ಉದ್ವಿಗ್ನತೆಯ ಮಧ್ಯೆ ನಡೆದ ಅಂತಿಮ ಯಾತ್ರೆಯಲ್ಲಿ ನೂರಾರು ಜನರು ಭಾಗಿಯಾಗಿ ಕಣ್ಣೀರಿಟ್ಟರು.


ಚರ್ಚ್‌ನಲ್ಲಿ ಎರಡು ಗಂಟೆ ಸಾಮೂಹಿಕ ಪ್ರಾರ್ಥನೆ: ಮೃತದೇಹಗಳನ್ನು ಮೊದಲು ಕುಟುಂಬದ ಮನೆಗಳಿಗೆ ತರಲಾಯಿತು. ಮರಿಯಮಂಗಲದ ಅಂತೋನಿಸ್ವಾಮಿ, ಪೀಟರ್ ಮತ್ತು ತೋಮಿಯರ್ ಪಾಳ್ಯದ ಡೇವಿಡ್ ಕುಮಾರ್ ಅವರ ಮನೆಗಳಲ್ಲಿ ಕುಟುಂಬಸ್ಥರು ಅಂತಿಮ ಪೂಜೆ ಸಲ್ಲಿಸಿದರು.

ಬಳಿಕ ಮೂವರ ಮೃತದೇಹಗಳನ್ನು ತೋಮಿಯರ್ ಪಾಳ್ಯದ ಚರ್ಚ್‌ಗೆ ತರಲಾಯಿತು. ಚರ್ಚ್‌ನ ಫಾದರ್ ಕೆ. ಚಾರ್ಲ್ಸ್ ನೇತೃತ್ವದಲ್ಲಿ ಎರಡು ಗಂಟೆಗಳ ಕಾಲ ಸಾಮೂಹಿಕ ಪ್ರಾರ್ಥನೆ ನಡೆಯಿತು.

ಈ ಪ್ರಾರ್ಥನೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ 18 ಚರ್ಚ್‌ಗಳ ಪಾದ್ರಿಗಳು ಮೃತರ ಬಂಧುಗಳು, ಗ್ರಾಮಸ್ಥರು ಪಾಲ್ಗೊಂಡರು. "ದೇವರೇ ಇವರ ಆತ್ಮಕ್ಕೆ ಶಾಂತಿ ನೀಡು, ಕುಟುಂಬಕ್ಕೆ ನ್ಯಾಯ ಕೊಡಿಸು" ಎಂದು ಪ್ರಾರ್ಥಿಸಲಾಯಿತು. ಚರ್ಚ್ ಆವರಣವೆಲ್ಲಾ ಭಾವುಕತೆಯಿಂದ ತುಂಬಿತ್ತು.

**ಸ್ವಗ್ರಾಮದಲ್ಲೇ ಅಂತಿಮ ಸಂಸ್ಕಾರ** : ಪ್ರಾರ್ಥನೆ ಬಳಿಕ ಮೂವರ ಮೃತದೇಹಗಳನ್ನು ಅವರವರ ಸ್ವಗ್ರಾಮಗಳಿಗೆ ತೆಗೆದುಕೊಂಡು ಹೋಗಲಾಯಿತು. ಕ್ರೈಸ್ತ ಸಮುದಾಯದ ಸಂಪ್ರದಾಯದಂತೆ ಫಾದರ್ ಕೆ. ಚಾರ್ಲ್ಸ್ ಅವರ ನೇತೃತ್ವದಲ್ಲಿ ಅಂತಿಮ ವಿಧಿ ವಿಧಾನ ನೆರವೇರಿಸಿ, ಮರಿಯಮಂಗಲ ಮತ್ತು ತೋಮಿಯರ್ ಪಾಳ್ಯದ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು.

**ಶಾಸಕರು ಸಾಂತ್ವನ, ಪರಿಹಾರ ವಿತರಣೆ:** ಅಂತ್ಯಕ್ರಿಯೆಯಲ್ಲಿ ಹನೂರು ಶಾಸಕ ಎಂ.ಆರ್. ಮಂಜುನಾಥ್ ಭಾಗಿಯಾಗಿದ್ದರು. ಪ್ರಾರ್ಥನೆಗೂ ಮುನ್ನ ಅವರು ಮೂರು ಕುಟುಂಬಗಳ ಮನೆಗಳಿಗೆ ತೆರಳಿ ಸಾಂತ್ವನ ಹೇಳಿದರು.



ಸರ್ಕಾರದಿಂದ ಘೋಷಿಸಿರುವ ತಾತ್ಕಾಲಿಕ5 ಲಕ್ಷ ಪರಿಹಾರದ ಚೆಕ್ಕನ್ನು ಪ್ರತಿ ಕುಟುಂಬಕ್ಕೂ ವಿತರಿಸಿದರು. "ಮ್ಯಾಜಿಸ್ಟ್ರೇಟ್ ತನಿಖೆ ಪೂರ್ಣಗೊಂಡ ಬಳಿಕ ಉಳಿದ ?10 ಲಕ್ಷ ಮತ್ತು ಕುಟುಂಬಕ್ಕೆ ಉದ್ಯೋಗ ನೀಡಲು ಪ್ರಯತ್ನಿಸಲಾಗುವುದು. ತಪ್ಪಿತಸ್ಥರಿಗೆ ಶಿಕ್ಷೆ ತಪ್ಪಿದ್ದಲ್ಲ" ಎಂದು ಭರವಸೆ ನೀಡಿದರು. ಶಾಗ್ಯ ಪ್ರಕರಣದ ಬಳಿಕ ಮೊದಲ ಬಾರಿಗೆ ಮೂರು ಕುಟುಂಬಗಳು ಒಂದೆಡೆ ಸೇರಿ ಅಂತಿಮ ವಿದಾಯ ಹೇಳಿದವು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

"ತಂದೆಯನ್ನು ಕಳೆದುಕೊಂಡ ಮಕ್ಕಳ ಆಕ್ರಂದನ ಇಡೀ ಗ್ರಾಮವನ್ನೇ ಕರುಣಿಸಿತು" ಎಂದು ಸ್ಥಳೀಯರು ಹೇಳಿದರು.ಅಂತ್ಯಕ್ರಿಯೆಯಲ್ಲಿ ಬಂಧು–ಬಳಗ ಹಾಗೂ ಮಾರ್ಟಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ತೋಮಿಯರ್ ಪಾಳ್ಯ ಚರ್ಚ್‌ನಲ್ಲಿ ನಡೆದ ಪ್ರಾರ್ಥನೆ ಹಾಗೂ ಮೂವರ ಮನೆಗಳ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಅಂತ್ಯಕ್ರಿಯೆ ನಡೆಯುವ ಸ್ಥಳಗಳಲ್ಲಿಯೂ ಸಹ ಐಜಿಪಿ ಬೋರಲಿಂಗಯ್ಯ ಅವರ ಸೂಚನೆಯ ಮೇರೆಗೆ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಬಿಗಿ ಭದ್ರತೆ ಕೈಗೊಂಡಿದ್ದರು.

**ಐವನ್ ಡಿಸೋಜಾ ಭೇಟಿ:** ವಿಧಾನ ಪರಿಷತ್ ಸದಸ್ಯ ಹಾಗೂ ಕ್ರೈಸ್ತ ಸಮಯದಾಯದ ಮುಖಂಡ ಐವನ್ ಡಿಸೋಜಾ ಅವರು ಮೃತರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು. ಬಳಿಕ ಮಾತನಾಡಿದ ಅವರು, ಮೃತರ ಕುಟುಂಬದ ದುಃಖದಲ್ಲಿ ತಾನು ಕೂಡ ಭಾಗಿಯಾಗಿದ್ದು, ಘಟನೆ ಬಗ್ಗೆ ನ್ಯಾಯಸಮ್ಮತವಾದ ತನಿಖೆ ನಡೆಸಬೇಕು. ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ಅರಣ್ಯಾಧಿಕಾರಿಗಳ ಕ್ರಮವನ್ನು ಕ್ಷಮಿಸಲು ಸಾಧ್ಯವಿಲ್ಲ, ಅವರು ಮಿತಿಮೀರಿ ವರ್ತಿಸಿದ್ದಾರೆ. ಯಾರಿಗೂ, ಯಾರ ಜೀವವನ್ನೂ ತೆಗೆಯುವ ಅಧಿಕಾರ ಇಲ್ಲ. ಬಂದೂಕನ್ನು ಯಾವಾಗ ಬಳಸಬೇಕು ಎಂಬ ಪರಿಜ್ಞಾನ ಅಧಿಕಾರಿಗಳಿಗೆ ಇರಬೇಕಿತ್ತು. ಮೂವರು ಅಮಾಯಕರನ್ನು ಬಲಿ ತೆಗೆದುಕೊಳ್ಳಲು ಅಧಿಕಾರ ಕೊಟ್ಟವರು ಯಾರು? ಇಡೀ ಘಟನೆ ಖಂಡನೀಯ ಎಂದು ಐವನ್ ಡಿಸೋಜಾ ಕಿಡಿಕಾರಿದರು.

1 ಕೋಟಿ ರೂ. ಪರಿಹಾರ, ಸರ್ಕಾರಿ ನೌಕರಿ ನೀಡಿ: ನ್ಯಾಯಾಂಗ ತನಿಖೆಗೆ ಸಾಕಷ್ಟು ಸಮಯ ಬೇಕಾಗುವುದರಿಂದ ಎಸ್‌ಐಟಿ ತನಿಖೆಯೇ ಸೂಕ್ತ. ಎಸ್‌ಐಟಿ ತನಿಖೆ ನಡೆದರೆ ತಪ್ಪಿತಸ್ಥರಿಗೆ ಖಂಡಿತವಾಗಿಯೂ ಶಿಕ್ಷೆ ಆಗುತ್ತದೆ. ಮೃತರ ಕುಟುಂಬಗಳಿಗೆ ಕನಿಷ್ಠ 1 ಕೋಟಿ ರೂ. ಪರಿಹಾರ ಘೋಷಿಸಬೇಕು. ಕುಟುಂಬದ ತಲಾ ಒಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದು ಸರ್ಕಾರವನ್ನು ಅವರು ಒತ್ತಾಯಿಸಿದರು.

# ಬಿಡಾಡಿ ಜಾನುವಾರುಗಳ ಹಾವಳಿ ತಡೆಗೆ ಪುರಸಭೆ ಕಾರ್ಯಾಚರಣೆ

**ಗುಂಡ್ಲುಪೇಟೆ:** ಪಟ್ಟಣದ ರಾಷ್ಟ್ರೀಯ ಹೆದ್ದಾರಿ ರಸ್ತೆಗಳಲ್ಲಿ ಬಿಡಾಡಿ ದನಗಳ ಹಾವಳಿ ಯಿಂದ ಅಡ್ಡಾದಿಡ್ಡಿಯಾಗಿ ಸಂಚರಿಸಿ, ರಸ್ತೆಗಳಲ್ಲೇ ಮಲಗುತ್ತಿದ್ದ ಹಿನ್ನೆಲೆಯಲ್ಲಿ ಪುರಸಭೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 8 ಜಾನುವಾರುಗಳನ್ನು ವಶಕ್ಕೆ ಪಡೆದರು.

ಕಳೆದ ಮೂರು ತಿಂಗಳಿಂದ ಪಟ್ಟಣದಲ್ಲಿ ಬಿಡಾಡಿ ದನಗಳ ಹಾವಳಿಯಿಂದ ಸಾರ್ವಜನಿಕರು, ಪಾದಚಾರಿಗಳು ಹಾಗೂ ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದರು. ಈ ಕುರಿತು ಸ್ಥಳೀಯ ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾಗಿದ್ದಲ್ಲದೆ, ವಿವಿಧ ಕನ್ನಡಪರ ಸಂಘಟನೆಗಳು ಪುರಸಭೆಗೆ ಮನವಿ ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಿದ್ದವು. ಸಾರ್ವಜನಿಕರ ಹಿತದೃಷ್ಟಿಯಿಂದ ಪರಿಸರ ಅಭಿಯಂತರ ಮಹೇಶ್, ಆರೋಗ್ಯ ನಿರೀಕ್ಷಕರಾದ ಸುಷ್ಮಾ ಹಾಗೂ ಪರಮೇಶ್ ನೇತೃತ್ವದಲ್ಲಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೂರು ದೊಡ್ಡ ಹಾಗೂ ಐದು ಸಣ್ಣ ಜಾನುವಾರುಗಳನ್ನು ವಶಕ್ಕೆ ಪಡೆದರು.



ಅವುಗಳನ್ನು ಮೈಸೂರಿನ ಪಿಂಜರಾಪೋಲ್ಗೆ ಕಳುಹಿಸಲು ಸಿದ್ಧತೆ ನಡೆಸಲಾಗಿತ್ತು.

ಈ ವೇಳೆ ಜಾನುವಾರುಗಳ ಮಾಲೀಕರು ಪುರಸಭೆಗೆ ಆಗಮಿಸಿ, ಮೇವಿನ ಕೊರತೆ ಹಾಗೂ ಬಡತನದ ಕಾರಣದಿಂದ ಜಾನುವಾರುಗಳನ್ನು ಹೊರಗೆ ಬಿಡಬೇಕಾಯಿತು ಎಂದು ತಿಳಿಸಿ, ಇನ್ನು ಮುಂದೆ ರಸ್ತೆಗೆ ಬಿಡುವುದಿಲ್ಲ ಎಂದು ಮನವಿ ಮಾಡಿದರು.


ಮಾಲೀಕರ ಮನವಿಯನ್ನು ಪರಿಗಣಿಸಿದ ಪುರಸಭೆ ಮುಖ್ಯಾಧಿಕಾರಿಗಳು ಮಾನವೀಯ ದೃಷ್ಟಿಯಿಂದ ಪ್ರತಿ ಜಾನುವಾರಿಗೆ ?500ರಂತೆ ದಂಡ ವಿಧಿಸಿ, ಮುಂದಿನ ದಿನಗಳಲ್ಲಿ ಜಾನುವಾರುಗಳನ್ನು ರಸ್ತೆಗೆ ಬಿಡದಂತೆ ಕಟ್ಟುನಿಟ್ಟಿನ ಅಂತಿಮ ಎಚ್ಚರಿಕೆ ನೀಡಿ ಬಿಡುಗಡೆ ಮಾಡಿದರು.

ಇನ್ನು ಮುಂದೆ ರಸ್ತೆಯಲ್ಲಿ ಜಾನುವಾರುಗಳನ್ನು ಬಿಟ್ಟರೆ ಯಾವುದೇ ಮುನ್ಸೂಚನೆ ನೀಡದೆ ನೇರವಾಗಿ ಮೈಸೂರಿನ ಪಿಂಜರಾಪೋಲ್ಗೆ ಕಳುಹಿಸಲಾಗುವುದು. ಜತೆಗೆ ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

# ನುಲಿಯ ಚಂದಯ್ಯ ಜಯಂತಿ : 19ರಂದು ಸಭೆ

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಆ.28ರಂದು ಆಚರಣೆ ಮಾಡುವ ಸಂಬಂಧ ಆ. 19ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಪೂರ್ವಭಾವಿ ಸಭೆಯನ್ನು ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 409ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮ ಆಚರಣೆಯ ರೂಪುರೇಷೆಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮುಖಂಡರು,



ಸಂಘ–ಸಂಸ್ಥೆಗಳ ಪದಾಧಿಕಾರಿಗಹಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಪೂರ್ವಭಾವಿ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸತೀಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಕ್ತಿ ಪಂಥದ ಹರಿಕಾರ ರಾಮಾನುಜಾಚಾರ್ಯ




ವೀಣಾ ಹೇಮಂತ್‌ಗೌಡ ಪಾಟೀಲ್

ಭಾರತ ದೇಶದಲ್ಲಿ ಭಕ್ತಿ ಪಂಥದ ಹರಿಕಾರರಲ್ಲಿ ಶ್ರೀ ರಾಮಾನುಜಾಚಾರ್ಯರು ಒಬ್ಬರು. ಬೇರೊಂದು ರಾಜ್ಯದಲ್ಲಿ ಹುಟ್ಟಿದರೂ ರಾಮಾನುಜಾಚಾರ್ಯರು ಬಹುಳಷ್ಟು ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿಯೇ ವಾಸಿಸಿದ್ದರು. ಕನ್ನಡದ ನೆಲದ ಹೊಯ್ಸಳ ವಂಶದ ಜೈನ ಧರ್ಮ ಅನುಯಾಯಿ ಮಹಾರಾಜನಾದ ಬಿಟ್ಟಿದೇವ ವೈಷ್ಣವ ಧರ್ಮದತ್ತ ಆಕರ್ಷಣೆ ಹೊಂದಲು ಕಾರಣವಾದವರು ಅವರು. ನಂತರ ಬಿಟ್ಟಿದೇವನ ಇಚ್ಛೆಯಂತೆ ಆತನಿಗೆ ವೈಷ್ಣವ ಧರ್ಮದ ದೀಕ್ಷೆಯನ್ನು ನೀಡಿ ವಿಷ್ಣುವರ್ಧನ ಎಂಬ ಹೊಸನಾಮದಿಂದ ಕರೆದವರು ಅವರು.

ದಾರ್ಶನಿಕ, ಸಂತ ಹಾಗೂ ವಿಶಿಷ್ಟ ಅದ್ವೈತದ ಪ್ರತಿಪಾದಕರಾಗಿದ್ದ ಅವರು ತಮಿಳುನಾಡಿನ ಶ್ರೀ ಪೆರಂಬುದೂರಿನಲ್ಲಿ ಕ್ರಿಸ್ತಶಕ 1017ರಲ್ಲಿ ಜನಿಸಿದರು. ಬ್ರಾಹ್ಮಣ ಕುಟುಂಬದ ತಂದೆ ಅಸುರಿ ಕೇಶವ ಸೋಮಯಾಜಿ ದೀಕ್ಷಿತರು ಹಾಗೂ ತಾಯಿ ಕಾಂತಿಮತಿ..

ಬಾಲ್ಯದಲ್ಲಿಯೇ ಅತ್ಯಂತ ಆಸ್ಥೆಯಿಂದ ವೇದಗಳನ್ನು ಓದಿಕೊಂಡ ರಾಮಾನುಜರು ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ್ದರು. ಅವರು ಮತ್ತೊರ್ವ ಪಂಡಿತರಾದ ಗೋಷ್ಠಿಪೂರ್ಣರನ್ನು ಭೇಟಿಯಾಗಿ ತಮ್ಮನ್ನು ಶಿಷ್ಯರಾಗಿ ಸ್ವೀಕರಿಸಲು ಕೇಳಿಕೊಂಡರು ಆದರೆ ಗೋಷ್ಠಿಪೂರ್ಣರು ರಾಮಾನುಜಾಚಾರ್ಯರನ್ನು ಮತ್ತೊಮ್ಮೆ ಬಾ ಎಂದು ಹೇಳಿ ಕಳುಹಿಸಿದರು. ಹೀಗೆ ಸರಿಸುಮಾರು ಒಂದಲ್ಲ ಎರಡಲ್ಲ 18 ಬಾರಿ ಗೋಷ್ಠಿ ಪೂರ್ಣರು ರಾಮಾನುಜಾಚಾರ್ಯರನ್ನು ಹಿಂತಿರುಗಿ ಹೋಗುವಂತೆ ಮಾಡಿದರು ಕೂಡ ಅವರ ಕುರಿತಾದ ಅಚಲ ಭಕ್ತಿಯನ್ನು ರಾಮಾನುಜರು ಕೈ ಬಿಡಲಿಲ್ಲ. ಇದರಿಂದ ಸಂತೃಪ್ತರಾದ ಗೋಷ್ಠಿ ಪೂರ್ಣರು ರಾಮಾನುಜಾಚಾರ್ಯರನ್ನು ಶಿಷ್ಯನಾಗಿ ಸ್ವೀಕರಿಸಿದರು. ತಮ್ಮಲ್ಲ ಜ್ಞಾನವನ್ನು ಅವರಿಗೆ ಧಾರೆಯೆರೆದರು.

ನಂತರ ಒಂದು ದಿನ ಏಕಾಂತದಲ್ಲಿ ರಾಮಾನುಜಾಚಾರ್ಯರನ್ನು ಕರೆದ ಘೋಷ್ಠಿ ಪೂರ್ಣರು ಅವರಿಗೆ ಶ್ರೀ ನಮೋ ನಾರಾಯಣಾಯ ಎಂಬ ಅಷ್ಟಾಕ್ಷರಿ ಮಂತ್ರವನ್ನು ಬೋಧಿಸಿದರು. ಈ ಅಷ್ಟಾಕ್ಷರಿ ಮಂತ್ರವನ್ನು ಬೇರೆಯವರಿಗೆ ಹೇಳಬೇಡ ಎಂದು ಅವರು ರಾಮಾನುಜಾಚಾರ್ಯರಿಗೆ ತಾಕೀತು



ಮಾಡಿದ್ದರು ಆದರೆ ಗುರುಗಳ ಅನುಮತಿಯನ್ನು ಮೀರಿ ರಾಮಾನುಜಾಚಾರ್ಯರು ದೇಗುಲದ ಮುಖ್ಯ ಶಿಖರದ ಬಳಿ ನಿಂತು ಎಲ್ಲರನ್ನೂ ಕರೆದು ಸಂತೃಪ್ತ ಹಾಗೂ ಸಮೃದ್ಧ ಬದುಕನ್ನು ಸಾಧಿಸಲು ಅತ್ಯವಶ್ಯಕವಾದ ಈ ಮಂತ್ರವನ್ನು ಎಲ್ಲರಿಗೂ ಕೂಗಿ ಕೂಗಿ ಹೇಳಿ ಜಪಿಸಲು ಒತ್ತಾಯಿಸಿದರು. ಇದು ಗುರುಗಳ ಕೋಪಕ್ಕೆ ಕಾರಣವಾಯಿತು. ನೀನು ನರಕಕ್ಕೆ ಹೋಗು ಎಂದು ಅವರು ಶಪಿಸಿದರು.

ಸಾವಿರಾರು ಜನರು ಸಮೃದ್ಧ ಬದುಕನ್ನು ಸಾಗಿಸಲು ಅನುಕೂಲವಾಗುತ್ತದೆ ಎಂದಾದರೆ ನಾನು ನರಕಕ್ಕೆ ಹೋದರೂ ಪರವಾಗಿಲ್ಲ ಎಂದು ರಾಮಾನುಜಾಚಾರ್ಯರು ಗುರುಗಳ ಶಾಪವನ್ನು ಒಪ್ಪಿಕೊಂಡರು.

ಮೂಲತಹ ತಮಿಳುನಾಡಿನವರಾದರೂ ಕೂಡ ಶ್ರೀ ರಾಮಾನುಜಾಚಾರ್ಯರು ಕರ್ನಾಟಕದೊಂದಿಗೆ ವಿಶೇಷ ಸಂಪರ್ಕವನ್ನು ಹೊಂದಿದ್ದಾರೆ. ತಮ್ಮ ಜೀವಿತದ ಬಹುಪಾಲು ಸಮಯವನ್ನು ಕರ್ನಾಟಕ ರಾಜ್ಯದ ಅದರಲ್ಲೂ ಹೊಯ್ಸಳ ರಾಜರ ರಾಜಾಶ್ರಯದಲ್ಲಿ ಕಳೆದಿರುವ ಅವರು ಇಲ್ಲಿಯೂ ಕೂಡ ತಮ್ಮ ಛಾಪನ್ನು ಬಿಟ್ಟು ಹೋಗಿದ್ದಾರೆ.

ಜೈನ ಪಂಥದ ಹೊಯ್ಸಳ ಮಹಾರಾಜ ಬಿಟ್ಟಿದೇವನು ರಾಮಾನುಜಾಚಾರ್ಯರ ಪ್ರವಚನಗಳಿಂದ ಆಕರ್ಷಿತನಾಗಿ ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನ ಎಂಬ ನಾಮಧೇಯದಿಂದ ಗುರುತಿಸಿಕೊಂಡನು.

ಕೆಲಕಾಲದ ನಂತರ ಇಂದಿನ ಮಂಡ್ಯ ಜಿಲ್ಲೆಯ ಮೇಲುಕೋಟೆಯ ಬಳಿ ವಾಸವಾಗಿದ್ದ ರಾಮಾನುಜಾಚಾರ್ಯರ ಕನಸಿನಲ್ಲಿ ಲೋಹದ ಚೆಲುವನಾರಾಯಣನ ವಿಗ್ರಹ ಬಂದು ತನ್ನನ್ನು ಮೂಲ ಸ್ಥಾನಕ್ಕೆ ಕರೆತರುವಂತೆ ಆಗ್ರಹಿಸಲು ಆರಂಭಿಸಿತು. ಧ್ಯಾನದ ಮೂಲಕ ದೆಹಲಿಯ ಸುಲ್ತಾನರ ಮಗಳ ಬಳಿ ವಿಗ್ರಹದ ಇರುವಿಕೆಯನ್ನು ಗುರುತಿಸಿದ ರಾಮಾನುಜಾಚಾರ್ಯರು ಕಾಲ್ನಡಿಗೆಯಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿ ನವಾಬರನ್ನು ಭೇಟಿಯಾದರು. ಸುಲ್ತಾನನ ಮಗಳ ಬಳಿ ಇರುವ ದೇವರ ವಿಗ್ರಹವನ್ನು ಆಕೆಯ ಮನವೊಲಿಸಿ ಮರಳಿ ತಂದ ರಾಮಾನುಜಾಚಾರ್ಯರು ಅದನ್ನು ಮೇಲುಕೋಟೆಯಲ್ಲಿ ಮತ್ತೆ ಪ್ರತಿಷ್ಠಾಪಿಸಿದರು.

ಮೇಲುಕೋಟೆಗೆ ಹತ್ತಿರದಲ್ಲಿರುವ ಬೆಟ್ಟದ ಬದಿಯಲ್ಲಿ ವೈಷ್ಣವರು ತಮ್ಮ ಹಣೆಗೆ ಧರಿಸಲು ಬಳಸುವ ಮೃತ್ತಿಕೆಯ ಕಚ್ಚಾ ಪದಾರ್ಥವು ಭೂಮಿಯಲ್ಲಿ ಇರುವುದನ್ನು ಅವರು ಗುರುತಿಸಿದರು.

ಭಕ್ತಿ ಪಂಥದ ಹರಿಕಾರರಲ್ಲಿ ಒಬ್ಬರಾದ ರಾಮಾನುಜಾಚಾರ್ಯರು ತಮ್ಮ ಜೀವನದ ಕೊನೆಯ ಸಮಯದಲ್ಲಿ ತಮ್ಮ ನಾಡಿಗೆ ಹೋಗಿ ನೆಲೆಸಿದರು. ಅಲ್ಲಿಯೇ ಅವರ ದೇಹಾಂತವಾಯಿತು.

800 ವರ್ಷಗಳ ಹಿಂದೆಯೇ ಗತಿಸಿ ಹೋಗಿರುವ ರಾಮಾನುಜಾಚಾರ್ಯರ ಪಾರ್ಥಿವ ಶರೀರವನ್ನು ಸರಿಸುಮಾರು ಎಂಟು ಶತಮಾನಗಳಿಂದ ಹಾಗೆಯೇ ಕಾಪಿಟ್ಟುಕೊಂಡು ಬಂದಿದ್ದಾರೆ ಎಂಬ ರಹಸ್ಯದ ಬೆನ್ನತ್ತಿ ನೋಡಿದಾಗ ತಮಿಳುನಾಡಿನ ಶ್ರೀರಂಗಂನಲ್ಲಿರುವ ಶ್ರೀ ರಂಗನಾಥ ಸ್ವಾಮಿ ದೇಗುಲದಲ್ಲಿ ಚರಮ ತಿರುನೇನಿ ಅಂದರೆ ಜೈವಿಕ ಅವಶೇಷಗಳನ್ನು ನಾವು ನೋಡಬಹುದು. ಭಾರತ ದೇಶದ ಭಕ್ತಿ ಪಂಥದ ಖ್ಯಾತ ತತ್ವಜ್ಞಾನಿ ಹಾಗೂ ದ್ವೈತ ಮತದ ಪ್ರತಿಪಾದಕರಾದ ರಾಮಾನುಜಾಚಾರ್ಯರನ್ನು ಈ ದೇಗುಲದಲ್ಲಿ ಕೋಟ್ಯಾಂತರ ಭಕ್ತರಿಗೂ ನೂರಾರು ವರ್ಷಗಳಿಂದ ಪೂಜಿಸುತ್ತಾ ಬಂದಿದ್ದಾರೆ. ಇದರಲ್ಲಿ ವಿಶೇಷ ಏನು ಎಂದು ನೀವು ಪ್ರಶ್ನಿಸಬಹುದು


ತಮ್ಮ ಬದುಕಿನ ಅಂತಿಮ ಗಳಿಗೆಯಲ್ಲಿ ಅವರು ಪದ್ಮಾಸನದ ಭಂಗಿಯಲ್ಲಿ ಕುಳಿತಿದ್ದು ಹಾಗೆಯೇ ಮರಣವನ್ನು ಹೊಂದಿದ್ದರು ಎಂದು ಹೇಳಲಾಗುತ್ತದೆ.

800 ವರ್ಷಗಳಿಂದ ಅವರ ದೇಹವನ್ನು ಪ್ರಾಕೃತಿಕ ಗಿಡಮೂಲಿಕೆಗಳು ಹಾಗೂ ಚಂದನದ ಕೊರಡಿನ್ನು ತೇಯ್ದ ಗಂಧ, ಕರ್ಪೂರ ಕುಂಕುಮ ಬಲ ನಿಗದಿತ ಮಿಶ್ರಣವನ್ನು ಬಳಸಿ ಕಾಯ್ದುಕೊಂಡು ಬರಲಾಗಿದೆ. ಇಲ್ಲಿ ಯಾವುದೇ ರೀತಿಯ ಆಧುನಿಕ ವೈದ್ಯಕೀಯ ಲೇಪನಗಳನ್ನು ಬಳಸಲಾಗಿಲ್ಲ.

ಇಂದಿಗೂ ಕೂಡ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ದೇಗುಲಕ್ಕೆ ಭೇಟಿ ನೀಡಿ ಅವರ ದರ್ಶನ ಮಾಡಿ ಪುನೀತರಾಗುತ್ತಾರೆ. ಅವರ ಉಗುರುಗಳನ್ನು ಭಕ್ತರ ದರ್ಶನಕ್ಕೆ ದೊರೆಯುವಂತೆ ಇಡಲಾಗಿದೆ.

ಭಾರತದಲ್ಲಿ ಆಧ್ಯಾತ್ಮಿಕತೆಯ ಸತ್ಯದರ್ಶನ ವಾಗುವಂತೆ ದೇಶದಾದ್ಯಂತ ಸಂಚರಿಸಿ ಜನರಲ್ಲಿ ಭಕ್ತಿಭಾವವನ್ನು ಉದ್ದೀಪಿಸಿದ ಭಕ್ತಿ ಪಂಥದ ಹರಿಕಾರದಲ್ಲಿ ಶ್ರೀ ರಾಮಾನುಜಾಚಾರ್ಯರು ಕೂಡ ಒಬ್ಬರು. ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಅವರು ಜನರಿಗೆ ಭಕ್ತಿ ಮತ್ತು ಭಕ್ತಿಯ ಮಾರ್ಗವು ಬದುಕಿನ ಯಾವುದೇ ಹಂತದಲ್ಲಿಯಾದರೂ ಸುಲಭವಾಗಿ ದೊರಕುವಂತೆ ಮಾಡಿದವರು.

ದೇಗುಲವನ್ನು ಎಲ್ಲಾ ವರ್ಗದ ಜನರು ಪ್ರವೇಶಿಸಬಹುದು. ದೇವಾಲಯದ ಸಂಪ್ರದಾಯವು ದೇವಾಲಯವನ್ನು ಅವರ ಸಂರಕ್ಷಿತ ಮೃತ ಅವಶೇಷಗಳ ಸ್ಥಳವೆಂದು ಗೌರವಿಸುತ್ತದೆ, ಆದರೆ ಕೆಲವು ವಿದ್ವಾಂಸರು ಅದು ಭೌತಿಕ ದೇಹದ ಬದಲು ಪವಿತ್ರ ಪ್ರಾತಿನಿಧ್ಯವನ್ನು ಹೊಂದಿರಬಹುದು ಎಂದು ಸೂಚಿಸಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ. ಹಿಂದೂ ಧರ್ಮದ ಅತ್ಯಂತ ಗೌರವಾನ್ವಿತ ಯಾತ್ರಾ ಸ್ಥಳಗಳಲ್ಲಿ ಒಂದಾಗಿರುವ ಈ ಸ್ಥಳದ ಮಹತ್ವವು ಬದಲಾಗದೆ ಉಳಿದಿದೆ.



ನಂಬಿಕೆ, ಇತಿಹಾಸ ಅಥವಾ ಸಂಪ್ರದಾಯದ ಮೂಲಕ ನೋಡಿದರೂ, ಶ್ರೀ ರಾಮಾನುಜಾಚಾರ್ಯರ ಪರಂಪರೆಯು ಭಕ್ತಿ, ಕರುಣೆ ಮತ್ತು ಆಧ್ಯಾತ್ಮಿಕ ಸಮಾನತೆಯ ಸಂದೇಶದೊಂದಿಗೆ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡುತ್ತಲೇ ಇದೆ. ಕೆಲವು ಪರಂಪರೆಗಳನ್ನು ಪುಸ್ತಕಗಳ ಮೂಲಕ ನೆನಪಿಸಿಕೊಳ್ಳಲಾಗುತ್ತದೆ. ಇನ್ನು ಕೆಲವು ದೇವಾಲಯಗಳ ಮೂಲಕ ನೆನಪಿಸಿಕೊಳ್ಳಲಾಗುತ್ತದೆ. ಮತ್ತು ಕೆಲವು ಜೀವನದ ಮೂಲಕ ಸ್ಫೂರ್ತಿ ನೀಡುತ್ತಲೇ ಇರುತ್ತವೆ. ಭಕ್ತಿರಸದ ಧಾರೆಯನ್ನು ಸಮಾಜದ ಎಲ್ಲ ವರ್ಗ,ವರ್ಣಗಳಲ್ಲಿ ಅವಿರತವಾಗಿ ತುಂಬಿದ ರಾಮಾನುಜಾಚಾರ್ಯರಿಗೆ ನಮೋ ನಮಃ

# ಸಿನಿಮಾ ಪ್ರೇರಣೆಯಾಗಬೇಕ ಹೊರತು ಅಪರಾಧಕ್ಕೆ ಮಾರ್ಗ ತೋರಬಾರದು






ಶಿವಬಸಪ್ಪ ಗು. ಜಂಗಾಲಿ

ಸಿನಿಮಾ ಎನ್ನುವುದು ಕೇವಲ ಎರಡು–ಮೂರು ಗಂಟೆಗಳ ಮನರಂಜನೆಯಲ್ಲ. ಅದು ಸಮಾಜದ ಮೇಲೆ ಪ್ರಭಾವ ಬೀರುವ ಶಕ್ತಿಯುತ ಮಾಧ್ಯಮ. ಪರದೆಯ ಮೇಲೆ ಕಾಣಿಸುವ ಪಾತ್ರಗಳು, ಅವರ ಮಾತುಗಳು, ಅವರ ಜೀವನಶೈಲಿ, ಅವರ ನಡೆ–ನುಡಿಗಳು ಪ್ರೇಕ್ಷಕರ ಮನಸ್ಸಿನಲ್ಲಿ ಯಾವುದೋ ಒಂದು ಗುರುತು ಮೂಡಿಸುತ್ತವೆ. ವಿಶೇಷವಾಗಿ ಯುವಜನತೆ ಸಿನಿಮಾಗಳನ್ನು ಕೇವಲ ಕಥೆಯಾಗಿ ನೋಡುವುದಿಲ್ಲ; ಕೆಲವೊಮ್ಮೆ ಪಾತ್ರಗಳನ್ನು ಅನುಕರಿಸುತ್ತಾರೆ, ಸಂಭಾಷಣೆಗಳನ್ನು ಬಳಸುತ್ತಾರೆ, ಅವರ ಉಡುಗೆ–ತೊಡುಗೆ ಮತ್ತು ಜೀವನಶೈಲಿಯನ್ನು ಅನುಸರಿಸುತ್ತಾರೆ. ಆದ್ದರಿಂದ ಸಿನಿಮಾ ನಿರ್ಮಿಸುವವರ ಮೇಲೆ ದೊಡ್ಡ ಸಾಮಾಜಿಕ ಜವಾಬ್ದಾರಿಯೂ ಇದೆ. ಅಪರಾಧದ ಕಥೆ ಹೇಳುವುದು ತಪ್ಪಲ್ಲ; ಆದರೆ ಅಪರಾಧವನ್ನು ವೈಭವೀಕರಿಸಿ, ಅಪರಾಧಿಯನ್ನು ನಾಯಕನಂತೆ, ಮಾದರಿಯಂತೆ, ಆಕರ್ಷಕ ವ್ಯಕ್ತಿತ್ವದಂತೆ ತೋರಿಸುವುದು ಖಂಡಿತವಾಗಿಯೂ ಚಿಂತಿಸಬೇಕಾದ ಬೆಳವಣಿಗೆ.

ಇತ್ತೀಚಿನ ವರ್ಷಗಳಲ್ಲಿ ಕೊಲೆ, ದರೋಡೆ, ಗ್ಯಾಂಗ್‌ವಾರ್, ರೌಡಿಸಂ, ಮಾದಕ ವಸ್ತುಗಳ ಜಾಲ, ಹಣಕ್ಕಾಗಿ ನಡೆಯುವ ಅಪರಾಧ, ಪ್ರತೀಕಾರ ಮತ್ತು ಹಿಂಸೆಯನ್ನು ಕೇಂದ್ರವಾಗಿಟ್ಟುಕೊಂಡ ಕಥೆಗಳು ಹೆಚ್ಚಾಗಿ ಕಾಣಿಸುತ್ತಿವೆ. ಕ್ರೈಂ ಕಥೆಗಳಿಗೆ ಪ್ರೇಕ್ಷಕರನ್ನು ಸೆಳೆಯುವ ಸಾಮರ್ಥ್ಯವಿದೆ ಎಂಬುದು ನಿಜ. ಕುತೂಹಲ, ರೋಚಕತೆ, ಸಸ್ಪೆನ್ಸ್ ಮತ್ತು ತಿರುವುಗಳು ಸಿನಿಮಾವನ್ನು ಮನರಂಜನೀಯವಾಗಿಸಬಹುದು. ಆದರೆ ಸಮಸ್ಯೆ ಕಥೆಯಲ್ಲಿಲ್ಲ; ಕಥೆಯನ್ನು ಹೇಳುವ ರೀತಿಯಲ್ಲಿದೆ. ಅಪರಾಧದ ಪರಿಣಾಮವನ್ನು ತೋರಿಸುವ ಬದಲು ಅಪರಾಧಿಯ ಶಕ್ತಿ, ಹಣ, ಭಯ ಹುಟ್ಟಿಸುವ ಸಾಮರ್ಥ್ಯ ಮತ್ತು ಐಷಾರಾಮಿ ಜೀವನವನ್ನೇ ವಿಜೃಂಭಿಸಿದರೆ, ಪ್ರೇಕ್ಷಕರ ಮನಸ್ಸಿನಲ್ಲಿ ತಪ್ಪು ಸಂದೇಶ ಮೂಡುವ ಸಾಧ್ಯತೆ ಇರುತ್ತದೆ.

ಒಬ್ಬ ಅಪರಾಧಿ ಹತ್ತು ಜನರನ್ನು ಹೆದರಿಸುತ್ತಾನೆ, ಪೊಲೀಸರನ್ನೇ ಸವಾಲು ಮಾಡುತ್ತಾನೆ, ತನ್ನ ಸುತ್ತಲೂ ದೊಡ್ಡ ಗುಂಪನ್ನು ಕಟ್ಟಿಕೊಳ್ಳುತ್ತಾನೆ, ದುಡ್ಡು ಮತ್ತು ಅಧಿಕಾರವನ್ನು ಅನುಭವಿಸುತ್ತಾನೆ ಎಂಬುದನ್ನು ಅದ್ದೂರಿಯಾಗಿ ತೋರಿಸಿ, ಕೊನೆಯಲ್ಲಿ ಸಣ್ಣ ಶಿಕ್ಷೆಯೊಂದಿಗೆ ಕಥೆ ಮುಗಿದರೆ, ಅಪರಾಧದ ಭೀಕರತೆ ಎಲ್ಲಿಗೆ ಹೋಯಿತು  ಅಪರಾಧದ ಹಿಂದೆ ನಾಶವಾಗುವ ಕುಟುಂಬಗಳು, ಕಣ್ಣೀರು ಹಾಕುವ ತಾಯಂದಿರು, ತಂದೆ–ತಾಯಿಯನ್ನು ಕಳೆದುಕೊಳ್ಳುವ ಮಕ್ಕಳು, ಜೀವನಪೂರ್ತಿ ಗಾಯ ಹೊರುವ ಸಂತ್ರಸ್ತರು, ಜೈಲಿನಲ್ಲಿ ಕಳೆಯುವ ವರ್ಷಗಳು ಇವೆಲ್ಲವೂ ಕಥೆಯ ಭಾಗವಾಗಬೇಕು. ಇಲ್ಲದಿದ್ದರೆ ಅಪರಾಧ ಒಂದು ರೋಚಕ ಸಾಹಸವಾಗಿ ಕಾಣುವ ಅಪಾಯವಿದೆ.

ಸಿನಿಮಾ ಸಮಾಜವನ್ನು ನೇರವಾಗಿ ಬದಲಾಯಿಸುತ್ತದೆ ಎಂದು ಹೇಳುವುದು ಸರಳೀಕರಣವಾಗಬಹುದು. ಆದರೆ ಸಿನಿಮಾ ಸಮಾಜದ ಕಲ್ಪನೆಗಳು, ಭಾಷೆ, ಫ್ಯಾಷನ್, ನಡವಳಿಕೆ ಮತ್ತು ಚರ್ಚೆಗಳ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ವಿಶೇಷವಾಗಿ ಕಿರಿಯ ವಯಸ್ಸಿನ ಪ್ರೇಕ್ಷಕರಲ್ಲಿ ಪರದೆಯಲ್ಲಿನ ಹೀರೋ ಪಾತ್ರದ ಪ್ರಭಾವ ಹೆಚ್ಚಿರಬಹುದು. ಹೀಗಾಗಿ ಅಪರಾಧವನ್ನು ಅನುಕರಿಸಬಹುದಾದ ರೀತಿಯಲ್ಲಿ ಪ್ರದರ್ಶಿಸುವಾಗ ನಿರ್ಮಾಪಕರು ಮತ್ತು ನಿರ್ದೇಶಕರು ಹೆಚ್ಚು ಎಚ್ಚರಿಕೆ ವಹಿಸಬೇಕಾಗಿದೆ.

ಇಲ್ಲಿ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಹಾಗಾದರೆ ಕ್ರೈಂ ಸಿನಿಮಾಗಳನ್ನೇ ಮಾಡಬಾರದೇ  ಖಂಡಿತವಾಗಿಯೂ ಮಾಡಬಹುದು. ಸಮಾಜದಲ್ಲಿ ನಡೆಯುವ ಅಪರಾಧಗಳನ್ನು ಸಿನಿಮಾಗಳು ಪ್ರಶ್ನಿಸಬೇಕು, ಅದರ ಹಿಂದಿರುವ ಕಾರಣಗಳನ್ನು ಹುಡುಕಬೇಕು, ಅಪರಾಧದ ಪರಿಣಾಮಗಳನ್ನು ತೋರಿಸಬೇಕು. ಭ್ರಷ್ಟ ವ್ಯವಸ್ಥೆ, ಬಡತನ, ನಿರುದ್ಯೋಗ, ಕುಟುಂಬದ ಒತ್ತಡ, ಪ್ರತೀಕಾರದ ಮನೋಭಾವ, ಮಾದಕ ವ್ಯಸನ, ಅಧಿಕಾರದ ದುರುಪಯೋಗ ಇಂತಹ ಸಮಸ್ಯೆಗಳನ್ನು ಆಧಾರವಾಗಿಟ್ಟುಕೊಂಡು ಅತ್ಯುತ್ತಮ ಸಿನಿಮಾಗಳನ್ನು ನಿರ್ಮಿಸಬಹುದು. ಅಪರಾಧಿಯನ್ನು ಕೇವಲ ರಾಕ್ಷಸನಂತೆ ತೋರಿಸುವುದಕ್ಕಿಂತ, ಅಪರಾಧದ ಸಾಮಾಜಿಕ ಬೇರುಗಳನ್ನು ವಿಶ್ಲೇಷಿಸುವ ಸಿನಿಮಾಗಳು ಪ್ರೇಕ್ಷಕರಿಗೆ ಆಲೋಚನೆ ನೀಡುತ್ತವೆ.

ಒಳ್ಳೆಯ ಸಿನಿಮಾ ಪ್ರಶ್ನೆ ಹುಟ್ಟಿಸುತ್ತದೆ. ಕೆಟ್ಟ ಸಿನಿಮಾ ಕೆಲವೊಮ್ಮೆ ತಪ್ಪು ಆಕರ್ಷಣೆ ಹುಟ್ಟಿಸಬಹುದು. ಒಬ್ಬ ಯುವಕ ಸಿನಿಮಾ ನೋಡಿ  ಈ ರೀತಿಯ ಜೀವನ ನಡೆಸಿದರೆ ನಾನು ಕೂಡ ದೊಡ್ಡವನಾಗಬಹುದು ಎಂದು ಭಾವಿಸುವಂತಾಗಬಾರದು. ಬದಲಾಗಿ  ಈ ದಾರಿಯ ಅಂತ್ಯ ಎಷ್ಟು ಭೀಕರ   ಎಂದು ಯೋಚಿಸುವಂತಾಗಬೇಕು. ಇದೇ ಸಿನಿಮಾದ ಸಾಮಾಜಿಕ ಹೊಣೆಗಾರಿಕೆಯ ಮುಖ್ಯ ಅಂಶ.

ಇಂದು ಸಾಮಾಜಿಕ ಜಾಲತಾಣಗಳ ಕಾಲ. ಒಂದು ಸಿನಿಮಾದ ದೃಶ್ಯ ಕ್ಷಣಾರ್ಧದಲ್ಲಿ ಲಕ್ಷಾಂತರ ಜನರನ್ನು ತಲುಪುತ್ತದೆ. ಒಂದು ಸಂಭಾಷಣೆ ವೈರಲ್ ಆಗುತ್ತದೆ. ಒಂದು ಪಾತ್ರದ ಸ್ಟೈಲ್ ಟ್ರೆಂಡ್ ಆಗುತ್ತದೆ. ಒಂದು ಹಿಂಸಾತ್ಮಕ ದೃಶ್ಯವನ್ನು ಮಕ್ಕಳು ಕೂಡ ಮರುಮರು ನೋಡಬಹುದು. ಇಂತಹ ಸಂದರ್ಭದಲ್ಲಿ ಸಿನಿಮಾದಲ್ಲಿ ತೋರಿಸುವ ಪ್ರತಿಯೊಂದು ವಿಷಯದ ಪರಿಣಾಮದ ಬಗ್ಗೆ ಚಿಂತಿಸುವುದು ಇನ್ನಷ್ಟು ಅಗತ್ಯವಾಗಿದೆ. ಹಿಂದೆ ಸಿನಿಮಾ ಥಿಯೇಟರ್‌ಗೆ ಸೀಮಿತವಾಗಿದ್ದರೆ, ಇಂದು ಮೊಬೈಲ್ ಪರದೆ ಪ್ರತಿಯೊಬ್ಬರ ಕೈಯಲ್ಲಿದೆ.

ಇದರರ್ಥ ಸೆನ್ಸಾರ್‌ಶಿಪ್ ಮೂಲಕ ಪ್ರತಿಯೊಂದು ಕ್ರೈಂ ದೃಶ್ಯವನ್ನೂ ತೆಗೆದುಹಾಕಬೇಕು ಎಂದಲ್ಲ. ಕಲಾತ್ಮಕ ಸ್ವಾತಂತ್ರ್ಯ ಅತ್ಯಂತ ಮುಖ್ಯ. ನಿರ್ದೇಶಕನಿಗೆ ತನ್ನ ಕಥೆಯನ್ನು ಹೇಳುವ ಹಕ್ಕಿದೆ. ಆದರೆ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಒಂದೇ ನಾಣ್ಯದ ಎರಡು ಮುಖಗಳು.  ನಾನು ಕಥೆ ಹೇಳುತ್ತಿದ್ದೇನೆ  ಎಂಬ ಕಾರಣಕ್ಕೆ ಯಾವುದೇ ಸಾಮಾಜಿಕ ಪರಿಣಾಮದ ಬಗ್ಗೆ ಯೋಚಿಸದೆ ಇರಲು ಸಾಧ್ಯವಿಲ್ಲ. ಅದೇ ರೀತಿ ಪ್ರೇಕ್ಷಕರಿಗೂ ವಿವೇಚನೆ ಅಗತ್ಯ. ಪರದೆಯ ಮೇಲೆ ಕಾಣಿಸುವ ಪ್ರತಿಯೊಂದೂ ಜೀವನದ ಮಾದರಿ ಅಲ್ಲ ಎಂಬ ಅರಿವು ಇರಬೇಕು.

ಸಿನಿಮಾದಲ್ಲಿ ಹೀರೋ ಎಂದರೆ ಕೇವಲ ಹೊಡೆದಾಡುವವನು, ನೂರು ಜನರನ್ನು ಒಬ್ಬನೇ ಎದುರಿಸುವವನು, ಕಾನೂನನ್ನು ತನ್ನ ಕೈಗೆ ತೆಗೆದುಕೊಳ್ಳುವವನು ಅಥವಾ ಭಯ ಹುಟ್ಟಿಸುವವನು ಎಂಬ ಕಲ್ಪನೆ ಬದಲಾಗಬೇಕು. ನಿಜವಾದ ಹೀರೋ ಎಂದರೆ ಕಷ್ಟದಲ್ಲಿರುವವರನ್ನು ಕಾಪಾಡುವವನು, ಅನ್ಯಾಯದ ವಿರುದ್ಧ ಕಾನೂನುಬದ್ಧವಾಗಿ ಹೋರಾಡುವವನು, ತನ್ನ ಕುಟುಂಬವನ್ನು ಗೌರವಿಸುವವನು, ಸಮಾಜದ ಬಗ್ಗೆ ಕಾಳಜಿ ಹೊಂದಿರುವವನು. ಇಂತಹ ಪಾತ್ರಗಳು ಕೂಡ ರೋಚಕವಾಗಿರಬಹುದು. ಪ್ರೇಕ್ಷಕರನ್ನು ಸೆಳೆಯಲು ಅಪರಾಧ ಮತ್ತು ಹಿಂಸೆಯೇ ಏಕೈಕ ಮಾರ್ಗವಲ್ಲ.

ನಮ್ಮ ಸುತ್ತಲೂ ಸಾವಿರಾರು ನಿಜವಾದ ಹೀರೋಗಳಿದ್ದಾರೆ. ರೈತ, ಸೈನಿಕ, ಶಿಕ್ಷಕ, ವೈದ್ಯ, ಪೊಲೀಸ್, ಅಗ್ನಿಶಾಮಕ ಸಿಬ್ಬಂದಿ, ವಿಜ್ಞಾನಿ, ಸಾಮಾಜಿಕ ಕಾರ್ಯಕರ್ತ, ಕ್ರೀಡಾಪಟು, ಕಾರ್ಮಿಕ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುವ ಪ್ರತಿಯೊಬ್ಬರೂ ಸಮಾಜದ ನಿಜವಾದ ನಾಯಕರು. ಅವರ ಬದುಕಿನಲ್ಲೂ ಸಂಘರ್ಷವಿದೆ, ಕಣ್ಣೀರಿದೆ, ಗೆಲುವಿದೆ, ಸೋಲಿದೆ, ತ್ಯಾಗವಿದೆ. ಅಂತಹ ಕಥೆಗಳನ್ನು ದೊಡ್ಡ ಪರದೆಯ ಮೇಲೆ ತರುವ ಪ್ರಯತ್ನ ಹೆಚ್ಚಾಗಬೇಕು.

ಒಬ್ಬ ಶಿಕ್ಷಕ ತನ್ನ ವಿದ್ಯಾರ್ಥಿಯ ಬದುಕನ್ನು ಬದಲಿಸುವ ಕಥೆ, ಒಬ್ಬ ರೈತ ಪ್ರಕೃತಿಯೊಂದಿಗೆ ಹೋರಾಡಿ ಕುಟುಂಬವನ್ನು ಉಳಿಸುವ ಕಥೆ, ಒಬ್ಬ ಸಾಮಾನ್ಯ ವ್ಯಕ್ತಿ ಭ್ರಷ್ಟ ವ್ಯವಸ್ಥೆಯ ವಿರುದ್ಧ ಕಾನೂನುಬದ್ಧ ಹೋರಾಟ ನಡೆಸುವ ಕಥೆ, ಒಬ್ಬ ಮಹಿಳೆ ತನ್ನ ಕುಟುಂಬ ಮತ್ತು ಸಮಾಜದ ಸವಾಲುಗಳನ್ನು ಎದುರಿಸಿ ಸ್ವಾವಲಂಬಿಯಾಗುವ ಕಥೆ ಇವೆಲ್ಲವೂ ಪ್ರೇಕ್ಷಕರ ಹೃದಯ ಮುಟ್ಟಬಲ್ಲವು. ಸಿನಿಮಾ ಎಂದರೆ ಕೇವಲ ಗುಂಡಿನ ಸದ್ದು, ರಕ್ತ, ಕತ್ತಿ ಮತ್ತು ಪ್ರತೀಕಾರವಲ್ಲ. ಮನುಷ್ಯನ ಭಾವನೆಗಳಲ್ಲೂ ಅಪಾರ ನಾಟಕವಿದೆ.

ಅಪರಾಧ ಕಥೆಗಳನ್ನು ನಿರ್ಮಿಸುವಾಗ ಮತ್ತೊಂದು ಸೂಕ್ಷ್ಮ ವಿಷಯ ಗಮನಿಸಬೇಕು. ಅಪರಾಧಿಯ ವೈಯಕ್ತಿಕ ಹಿನ್ನೆಲೆಯನ್ನು ವಿವರಿಸುವುದು ಮತ್ತು ಅವನ ಅಪರಾಧವನ್ನು ಸಮರ್ಥಿಸುವುದು ಒಂದೇ ಅಲ್ಲ. ಕಾರಣವನ್ನು ಅರ್ಥಮಾಡಿಕೊಳ್ಳುವುದು ಬೇರೆ; ತಪ್ಪನ್ನು ನ್ಯಾಯೀಕರಿಸುವುದು ಬೇರೆ. ಸಿನಿಮಾಗಳು ಈ ಗಡಿಯನ್ನು ಸ್ಪಷ್ಟವಾಗಿ ಕಾಯ್ದುಕೊಳ್ಳಬೇಕು. ಅಪರಾಧದ ಹಿನ್ನೆಲೆಯನ್ನು ತೋರಿಸಬಹುದು, ಆದರೆ ಅದರ ಪರಿಣಾಮವನ್ನು ಮರೆಯಬಾರದು.

ಕೆಲವೊಮ್ಮೆ ಸಿನಿಮಾ  ಅಪರಾಧ ಮಾಡಬೇಡಿ  ಎಂಬ ಸಂದೇಶವನ್ನು ಕೊನೆಯಲ್ಲಿ ಒಂದು ಸಂಭಾಷಣೆಯ ಮೂಲಕ ಹೇಳುತ್ತದೆ. ಆದರೆ ಅದಕ್ಕೂ ಮೊದಲು ಎರಡು ಗಂಟೆಗಳ ಕಾಲ ಅಪರಾಧಿಯನ್ನೇ ಅದ್ಭುತ ವ್ಯಕ್ತಿಯಂತೆ ತೋರಿಸಿದರೆ, ಕೊನೆಯ ಐದು ನಿಮಿಷದ ಉಪದೇಶ ಎಷ್ಟು ಪರಿಣಾಮಕಾರಿ  ಪ್ರೇಕ್ಷಕನ ಮನಸ್ಸಿನಲ್ಲಿ ಉಳಿಯುವುದು ಸಂದೇಶವೇ ಅಥವಾ ಆ ಪಾತ್ರದ ಸ್ಟೈಲಾ  ಇದೇ ಪ್ರಶ್ನೆಯನ್ನು ಸಿನಿಮಾ ನಿರ್ಮಾಪಕರು ತಮ್ಮೊಳಗೆ ಕೇಳಿಕೊಳ್ಳಬೇಕು.

ಯುವಜನತೆ ನಮ್ಮ ದೇಶದ ಭವಿಷ್ಯ. ಅವರ ಕಲ್ಪನಾ ಲೋಕದಲ್ಲಿ ಯಾವ ರೀತಿಯ ನಾಯಕರು ಸ್ಥಾನ ಪಡೆಯುತ್ತಾರೆ ಎಂಬುದೂ ಮುಖ್ಯ. ಶ್ರಮಿಸಿ ಗೆಲ್ಲುವ ನಾಯಕ, ಸೋಲಿನಿಂದ ಪಾಠ ಕಲಿಯುವ ನಾಯಕ, ಕಾನೂನನ್ನು ಗೌರವಿಸುವ ನಾಯಕ, ಮಹಿಳೆಯರನ್ನು ಗೌರವಿಸುವ ನಾಯಕ, ದುರ್ಬಲರ ಪರ ನಿಲ್ಲುವ ನಾಯಕ ಇಂತಹ ಪಾತ್ರಗಳು ಯುವಕರಿಗೆ ಹೆಚ್ಚು ಸಕಾರಾತ್ಮಕ ಪ್ರೇರಣೆ ನೀಡುತ್ತವೆ. ಸಿನಿಮಾದ ಮೂಲಕ ಸಮಾಜಕ್ಕೆ ಮೌಲ್ಯಗಳನ್ನು ಬೋಧಿಸಬೇಕೆಂದಿಲ್ಲ; ಆದರೆ ಕನಿಷ್ಠ ತಪ್ಪು ಮೌಲ್ಯಗಳನ್ನು ಆಕರ್ಷಕವಾಗಿ ಮಾರಾಟ ಮಾಡದಿರುವ ಜವಾಬ್ದಾರಿ ಇರಬೇಕು.

ಸಿನಿಮಾ ಉಪದೇಶದ ವೇದಿಕೆಯಾಗಬೇಕೆಂಬ ನಿಯಮವಿಲ್ಲ. ಅದು ಮನರಂಜಿಸಬಹುದು, ನಗಿಸಬಹುದು, ಅಳಿಸಬಹುದು, ಬೆಚ್ಚಿಬೀಳಿಸಬಹುದು, ಪ್ರಶ್ನಿಸಬಹುದು. ಆದರೆ ಕೊನೆಗೆ ಅದು ಪ್ರೇಕ್ಷಕನ ಮನಸ್ಸಿನಲ್ಲಿ ಏನನ್ನಾದರೂ ಬಿಟ್ಟು ಹೋಗುತ್ತದೆ. ಆ ಗುರುತು ಭಯವೇ ಹಿಂಸೆಯ ಆಕರ್ಷಣೆಯೇ  ಅಪರಾಧದ ರೋಮಾಂಚವೇ  ಅಥವಾ ಜೀವನದ ಬಗ್ಗೆ ಹೊಸ ಚಿಂತನೆಯೇ  ಈ ಆಯ್ಕೆ ಕಥೆಗಾರರ ಕೈಯಲ್ಲಿದೆ.

ಇಂದು ತಂತ್ರಜ್ಞಾನ ಬೆಳೆಯುತ್ತಿದೆ. ಕಥೆ ಹೇಳುವ ವಿಧಾನ ಬದಲಾಗುತ್ತಿದೆ. ದೃಶ್ಯ ಪರಿಣಾಮಗಳು ಅದ್ಭುತವಾಗಿವೆ. ಸಿನಿಮಾಗಳ ವ್ಯಾಪ್ತಿ ಜಾಗತಿಕವಾಗಿದೆ. ಇಂತಹ ಸಮಯದಲ್ಲಿ ನಮ್ಮ ಕಥೆಗಳ ಗುಣಮಟ್ಟವೂ ಅಷ್ಟೇ ಎತ್ತರಕ್ಕೆ ಏರಬೇಕು. ಕೇವಲ ರಕ್ತಪಾತ, ರೌಡಿಸಂ ಮತ್ತು ಅಪರಾಧದ ದೃಶ್ಯಗಳಿಂದ ಪ್ರೇಕ್ಷಕರನ್ನು ಸೆಳೆಯುವ ಬದಲು, ಬಲವಾದ ಕಥೆ, ಗಟ್ಟಿಯಾದ ಪಾತ್ರಗಳು, ಮಾನವೀಯ ಭಾವನೆ ಮತ್ತು ಸಾಮಾಜಿಕ ವಾಸ್ತವಿಕತೆಯಿಂದ ಪ್ರೇಕ್ಷಕರನ್ನು ಗೆಲ್ಲುವ ಪ್ರಯತ್ನ ಹೆಚ್ಚಾಗಬೇಕು.

ಸಿನಿಮಾ ಸಮಾಜದ ಕನ್ನಡಿ ಎಂದು ಹೇಳುತ್ತಾರೆ. ಆದರೆ ಕನ್ನಡಿ ಕೇವಲ ಮುಖ ತೋರಿಸುವುದಲ್ಲ; ಕೆಲವೊಮ್ಮೆ ಮುಖದ ಮೇಲಿನ ಕಲೆಗಳನ್ನೂ ತೋರಿಸುತ್ತದೆ. ಅಪರಾಧದ ಕುರಿತ ಸಿನಿಮಾ ಸಮಾಜದ ಕತ್ತಲೆಯನ್ನು ತೋರಿಸಲಿ. ಆದರೆ ಆ ಕತ್ತಲೆಯನ್ನು ಸುಂದರವಾಗಿ ಅಲಂಕರಿಸಿ, ಅದನ್ನೇ ಆದರ್ಶ ಜೀವನದಂತೆ ಪ್ರದರ್ಶಿಸಬಾರದು. ಅಪರಾಧದ ಭೀಕರತೆಯನ್ನು ತೋರಿಸಲಿ, ಸಂತ್ರಸ್ತರ ನೋವನ್ನು ಹೇಳಲಿ, ಕಾನೂನಿನ ಮಹತ್ವವನ್ನು ನೆನಪಿಸಲಿ ಮತ್ತು ತಪ್ಪು ದಾರಿಯ ಅಂತ್ಯ ಎಷ್ಟು ದುಃಖಕರ ಎಂಬುದನ್ನು ಪ್ರೇಕ್ಷಕನ ಮನಸ್ಸಿಗೆ ತಲುಪಿಸಲಿ.

ಕೊನೆಗೆ, ಸಿನಿಮಾ ಒಂದು ಬಂದೂಕಲ್ಲ; ಆದರೆ ಅದು ಮನಸ್ಸಿನ ಮೇಲೆ ಗುಂಡಿನಂತೆ ಪರಿಣಾಮ ಬೀರುವಷ್ಟು ಶಕ್ತಿಶಾಲಿ ಮಾಧ್ಯಮ. ಅದನ್ನು ಹೇಗೆ ಬಳಸಬೇಕು ಎಂಬುದು ಕಥೆಗಾರರ ಕೈಯಲ್ಲಿದೆ. ಪ್ರೇಕ್ಷಕರನ್ನು ಬೆಚ್ಚಿಬೀಳಿಸುವುದು ಸುಲಭ; ಆದರೆ ಪ್ರೇಕ್ಷಕರನ್ನು ಯೋಚಿಸುವಂತೆ ಮಾಡುವುದು ದೊಡ್ಡ ಕಲೆ. ಅಪರಾಧಿಯನ್ನು ದೊಡ್ಡವನಾಗಿ ತೋರಿಸುವುದಕ್ಕಿಂತ, ಅಪರಾಧದಿಂದ ನಾಶವಾಗುವ ಸಾಮಾನ್ಯ ಮನುಷ್ಯನ ಬದುಕನ್ನು ತೋರಿಸುವ ಧೈರ್ಯ ಸಿನಿಮಾಗಳಿಗೆ ಬೇಕಾಗಿದೆ.

ಸಿನಿಮಾ ಅಪರಾಧದ ಕತ್ತಲೆಯನ್ನು ತೋರಿಸಲಿ; ಆದರೆ ಆ ಕತ್ತಲೆಯನ್ನೇ ಬೆಳಕಾಗಿ ಮಾರಾಟ ಮಾಡಬಾರದು. ಸಿನಿಮಾ ಹಿಂಸೆಯನ್ನು ವೈಭವೀಕರಿಸದೆ, ಮನುಷ್ಯತ್ವವನ್ನು ವಿಜೃಂಭಿಸಲಿ. ಸಿನಿಮಾ ಅಪರಾಧಕ್ಕೆ ಆಕರ್ಷಣೆ ಮೂಡಿಸುವುದಕ್ಕಿಂತ, ತಪ್ಪು ದಾರಿಯಿಂದ ದೂರ ಸರಿಯುವ ಪ್ರೇರಣೆ ನೀಡಲಿ. ಪರದೆಯ ಮೇಲೆ ಹೀರೋ ಆಗುವುದು ದೊಡ್ಡ ವಿಷಯವಲ್ಲ; ಪರದೆಯ ಆಚೆ ಸಮಾಜಕ್ಕೆ ಒಳ್ಳೆಯ ಸಂದೇಶ ಉಳಿಸುವ ಸಿನಿಮಾ ನಿರ್ಮಿಸುವುದೇ ನಿಜವಾದ ಗೆಲುವು.

# ಅಖಾಡದ ಅರಸು





ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 98

ಮಣ್ಣಿನ ವಾಸನೆ,ದಮ್ಮು ಮತ್ತು ಪರಂಪರೆಯ ಉಸಿರು ಬೆರೆತ ಬುಂದೇಲ್‌ಖಂಡದ ಅಖಾಡಗಳ ಜೀವಂತ ದಂತಕಥೆ ಶ್ರೀ ಭಗವಾನ್‌ದಾಸ್ ರಾಯ್ಕ್‌ವಾರ್. ಸಾಂಪ್ರದಾಯಿಕ ಬುಂದೇಲಿ ಸಮರ ಕಲೆ ಮತ್ತು ಜಾನಪದ ಕಲೆಗಳ ಪೋಷಕ ಹಾಗೂ ಗುರು ಎನಿಸಿರುವ ಇವರಿಗೆ 2026ರ ಪದ್ಮಶ್ರೀ ಗೌರವ ಸಂದಿದೆ.

ಅಳಿವಿನ ಅಂಚಿನಲ್ಲಿದ್ದ ಬುಂದೇಲಿ ಅಖಾಡ ಸಮರ ಕಲೆಯನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ. ಬುಂದೇಲ್‌ಖಂಡದ ವೀರ ಪರಂಪರೆಯ ಪ್ರತೀಕವಾದ ಈ ಕಲೆ ಕೇವಲ ಯುದ್ಧ ತಂತ್ರವಲ್ಲ. ಅದು ಶಿಸ್ತು, ಸ್ವಾಭಿಮಾನ ಮತ್ತು ಸಂಸ್ಕೃತಿಯ ಸಂಗಮ. ಕಾಲನ ಹೊಡೆತಕ್ಕೆ ಸಿಕ್ಕು ಮರೆಯಾಗುತ್ತಿದ್ದ ಈ ಪರಂಪರೆಯನ್ನು ರಾಯ್ಕ್‌ವಾರ್ ಅವರು ತಮ್ಮ ಅಖಾಡದಲ್ಲಿ ಮತ್ತೆ ಜೀವಂತಗೊಳಿಸಿದರು.

ಲಾಠಿ, ಖಡ್ಗ, ಭಾಲೆ, ಮಲ್ಲಯುದ್ಧ – ಈ ಪುರಾತನ ಯುದ್ಧ ತಂತ್ರಗಳಲ್ಲಿ ಸಾವಿರಾರು ಯುವಕರಿಗೆ ತರಬೇತಿ ನೀಡಿ ಅವರಲ್ಲಿ ಆತ್ಮವಿಶ್ವಾಸ ತುಂಬಿದರು. ಜಾನಪದ ಕಲೆಗಳೊಂದಿಗೆ ಸಮರ ಕಲೆಯನ್ನು ಬೆಸೆದು ಹೊಸ ತಲೆಮಾರಿಗೆ ತಮ್ಮ ಬೇರುಗಳ ಪರಿಚಯ ಮಾಡಿಕೊಟ್ಟರು. ಪದ್ಮಶ್ರೀ ಕೇವಲ ಒಬ್ಬ ಗುರುಗಳಿಗೆ ಸಂದ ಗೌರವವಲ್ಲ. ಅಖಾಡದ ಮಣ್ಣಿನಲ್ಲಿ ನಾಳಿನ ವೀರನ್ನು ರೂಪಿಸಿ, ಮರೆಯಾಗುತ್ತಿದ್ದ ಬುಂದೇಲಿ ಪರಾಕ್ರಮದ ಕಿಡಿಯನ್ನು ಆರದಂತೆ ಕಾಪಾಡಿದ ಸಂಸ್ಕೃತಿ ರಕ್ಷಕನಿಗೆ ಸಂದ ರಾಷ್ಟ್ರೀಯ ಸನ್ಮಾನ ಇದು. ಪರಂಪರೆ ಎಂದರೆ ವಸ್ತುಸಂಗ್ರಹಾಲಯದ ವಸ್ತುವಲ್ಲ, ಅದು ಬದುಕುವ ಕಲೆ ಎಂಬುದನ್ನು ಶ್ರೀ ಭಗವಾನ್‌ದಾಸ್ ರಾಯ್ಕ್‌ವಾರ್ ಅವರ ಸಾಧನೆ ದೇಶಕ್ಕೆ ಸಾರುತ್ತದೆ.

# ಡಿ. ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆ

**ಮೈಸೂರು:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆಯನ್ನು ಆಗಸ್ಟ್ 20 ರಂದು ಜನ್ಮ ದಿನಾಚರಣೆಯ ಪ್ರಯುಕ್ತ ಅಂದು ಬೆಳಿಗ್ಗೆ 10:00 ಗಂಟೆಗೆ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾ ಮಟ್ಟದ ಕಚೇರಿ ಸಂಕೀರ್ಣದ ಆವರಣದಲ್ಲಿ ಸ್ಥಾಪಿಸಲಾಗಿರುವ ಡಿ. ದೇವರಾಜ ಅರಸು ಅವರ ಪ್ರತಿಮೆಗೆ ಪುಷ್ಪಮಾಲಾರ್ಪಣೆ ಮಾಡುವ ಮೂಲಕ ಅಧಿಕೃತವಾಗಿ ಗೌರವ ನಮನ ಸಲ್ಲಿಸಲಾಗುತ್ತದೆ. ನಂತರ ಬೆಳಿಗ್ಗೆ 11:00 ಗಂಟೆಗೆ ಕರ್ನಾಟಕ ಕಲಾ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಮತ್ತು ಸಭಾ ಸಮಾರಂಭವನ್ನು ಆಯೋಜಿಸಲಾಗುವುದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,